# ದೇವರು ಮತ್ತು ಮಾನವ ಶ್ರಮೆ

## ಫ್ರಾಂಕ್ ಪ್ಯಾಕ್

ಬೈಬಲಿನ ದೇವರಲ್ಲಿ ನಂಬಿಕೆಯುಳ್ಳವರಾಗಿರುವಂತೆ, ಬಹಳ ಕಠಿಣವಾದ ನಮ್ಮ ಸಮಸ್ಯೆಗಳಲ್ಲಿ ಒಂದು ಮಾನವ ಶ್ರಮೆಯನ್ನು ಅರ್ಥಮಾಡಿಕೊಳ್ಳುವುದು. ನಿರಂತರ ವಾಗಿ ಒಳ್ಳೆಯವನೂ ಪ್ರೀತಿಸುವಾತನೂ ಹಾಗೆಯೇ ಸರ್ವಶಕ್ತನೂ ಆಗಿರುವನೆಂದು ಬೈಬಲು ಪ್ರಕಟಿಸಿದ ದೇವರು ಈ ಲೋಕದಲ್ಲಿಯ ತನ್ನ ಜೀವಿಗಳಿಗೆ ಅಷ್ಟೊಂದು ಶ್ರಮೆ ಬರುವಂತೆ - ಯಾಕೆ ಬಿಡುವನು? ದೇವರು ನಿಜವಾಗಿಯೂ ಲಕ್ಷ್ಯವಿಡುವನೋ? ಯುದ್ಧದ ಭಯಾನಕತೆಗಳನ್ನು ಆತನು ಯಾಕೆ ಬಿಡುತ್ತಾನೆ? ನಿರಪರಾಧಿಗಳು ಯಾಕೆ ಅಷ್ಟು ಶ್ರಮೆಯನ್ನು ಸಹಿಸಬೇಕು? ರೋಗವು ಯಾಕೆ ಅಂಥ ಭಯಂಕರ ನೋವನ್ನುಂಟು ಮಾಡಬೇಕು? ಶಿಶುಗಳು ಅಂಗವಿಕಲರಾಗಿ, ಮಾನಸಿಕ ಸಾಮರ್ಥ್ಯದ ಕೊರತೆಯುಳ್ಳ ವರಾಗಿ ಯಾಕೆ ಹುಟ್ಟಬೇಕು? ಇಂಥ ಮತ್ತು ಅನೇಕ ಇಂಥ ಪ್ರಶ್ನೆಗಳು ಸಭೆಯ ಹೊರಗೆ ಇರುವವರಿಂದ ಅಷ್ಟೇ ಅಲ್ಲ, ಕ್ರೈಸ್ತರಿಂದಲೂ ಕೇಳಲ್ಪಟ್ಟಿವೆ. ಮಾನವ ಶ್ರಮೆಯ ಬಂಡೆಗಳ ಮೇಲೆ ಕೆಲವರ ವಿಶ್ವಾಸವು ಒಡೆದು ಹೋಗಿರುವುದು ಸಮಸ್ಯೆಯು ತೀವ್ರತರದ್ದಾಗುತ್ತದೆ. ಈ ಸಮಸ್ಯೆಗೆ ತಕ್ಕಷ್ಟು ಪರಿಹಾರವನ್ನು ನಾವು ಕಂಡುಕೊಳ್ಳಲಿಕ್ಕಾಗದಿರುವಾಗ, ಈ ಅಧ್ಯಯನವು ಇತರರ ಹೋರಾಟಗಳನ್ನು ಕಡಿಮೆ ಮಾಡಬಹುದು ಮತ್ತು ನಮ್ಮಲ್ಲಿ ಪ್ರತಿಯೊಬ್ಬರು ಇನ್ನೂ ಹೊಸ ರೀತಿಯಲ್ಲಿ ಶ್ರಮೆಯನ್ನು ಅರ್ಥಮಾಡಿಕೊಳ್ಳಲು ನಮಗೆ ಸಹಾಯ ಮಾಡಬಹುದು.

ಶ್ರಮೆಯು ದೈಹಿಕ ನೋವನ್ನು ಅಷ್ಟೇ ಅಲ್ಲ, ನಿರಾಶೆಗಳನ್ನೂ ಮಾನಸಿಕ ಆಶಾಭಂಗಗಳನ್ನೂ ವಿಯೋಗ ದು ಖಗಳನ್ನೂ ಮತ್ತು ಮಾನವ ಹೃದಯದ ತೊಂದರೆ ಗಳನ್ನು ಒಳಗೊಂಡಿರುತ್ತದೆ. ಈ ಹೋರಾಟಗಳು ನಾಶಗೊಳಿಸುವ ತ್ವರಿತತೆಯಿಂದ ಬರಬಹುದು. ಇಲ್ಲವೇ ಅವು ನಿಧಾನವಾಗಿ ನಮ್ಮ ಆತ್ಮಗಳನ್ನು ಕುಗ್ಗಿಸಬಹುದು.

ಕ್ರೈಸ್ತನಾಗಿರುವಂಥದ್ದು ಶ್ರಮೆಪಡುವ ಸಮಸ್ಯೆಯನ್ನು ಬಗೆಹರಿಸಲು ಸುಲಭ ವಾದದ್ದನ್ನಾಗಿ ಮಾಡುವದಿಲ್ಲ, ಆದರೆ ಹೆಚ್ಚು ಕಷ್ಟಕರವಾದದ್ದಾನ್ನಾಗಿ ಮಾಡುತ್ತದೆ. ದೇವರಲ್ಲಿ ನಂಬದೇ ಇರುವವನು ಶ್ರಮೆಯನ್ನೂ ದು ಖಕರವಾದ ಸಂಗತಿಗಳನ್ನೂ ವಿವರಿಸುವಲ್ಲಿ ಸಮಸ್ಯೆ ಇರುವದಿಲ್ಲ. ವಿಶ್ವಕ್ಕೆ ಅರ್ಥವಿಲ್ಲದಿದ್ದರೆ, ಆದರೆ ಕೇವಲ ಸತ್ತ ಯಂತ್ರವಾಗಿದ್ದರೆ, ಮಾನವ ಜೀವಿಗಳಿಗಾಗಿ ಅದಕ್ಕೆ ಯಾವ ಚಿಂತೆಯಿರುವುದು? ಮನುಷ್ಯರು ಶ್ರಮೆಪಡಲಿ, ಪಡಿದಿರಲಿ ಅಂಥಾ ಜಗತ್ತು "ಗಮನವಿಡುವುದಿಲ್ಲ," ಯಾಕಂದರೆ "ಗಮನಕೊಡಲು" ಅದಕ್ಕೆ ಸಮಾರ್ಥ್ಯವಿರಲಾರದು. ಅರ್ಥರಹಿತ ಜಗತ್ತಿನಲ್ಲಿ ದು ಖದ ಸಂಗತಿಗಳು ಯಾಕೆ ಸಂಭವಿಸುತ್ತವೆ ಎಂಬುದಕ್ಕೆ ಯಾವುದೇ ಕಾರಣವನ್ನು ಹುಡುಕುವ ಅವಶ್ಯಕತೆಯಿರುವದಿಲ್ಲ. ವೈಯಕ್ತಿಕ ದೇವರಲ್ಲಿ - ವಿಮೋಚಿಸುವಾತನೂ, ತನ್ನನ್ನೆ ಕೊಡುವಾತನೂ, ಪ್ರೀತಿಸು ವಾತನೂ, ಸದಾಕಾಲವೂ ಮಾನವನಿಗಾಗಿ ಚಿಂತಿಸುವವನೂ ಆಗಿರುವಾತನಲ್ಲಿ ಒಬ್ಬನು ನಂಬುವ ಸಂಗತಿಯು ಸಮಸ್ಯೆಯ ತೀವ್ರತೆಯನ್ನು ಹೆಚ್ಚಿಸುತ್ತದೆ. ಹೀಗಿದ್ದರೂ ನಾಸ್ತಿಕನು ದೇವರ ಅಸ್ತಿತ್ವವನ್ನು ಅಲ್ಲಗಳೆಯುವದರಿಂದ ಪ್ರತಿಯೊಂದು ಸಮಸ್ಯೆಯಿಂದ ತಪ್ಪಿಸಿಕೊಳ್ಳುವುದಿಲ್ಲ. ಶ್ರಮೆಗೆ ಇಲ್ಲವೇ ಲೋಕದಲ್ಲಿಯ ಕೆಡುಕಿಗೆ ಅವರು ಲೆಕ್ಕ ಕೊಡ ಬೇಕಾಗಿರದೇ ಇದ್ದಾಗ್ಯೂ ಅವರು ಸ್ವಾರ್ಥ ರಹಿತತೆ, ಒಳ್ಳೆಯವರು ಹಾಗೂ ಇತರರಿಗಾಗಿ ಜೀವಿಸುವ ಮತ್ತು ಸಾಯುವವರ ಪಾರಾಕ್ರಮವನ್ನು ವಿವರಿಸುವ ಇನ್ನೂ ದೊಡ್ಡ

ಸಮಸ್ಯೆಯನ್ನು ಎದುರಿಸುತ್ತಾರೆ. ಯಾವುದು ಸರಿಯಾಗಿದೆಯೋ ಅದರ ನಿರ್ಧಾರಕ್ಕಾಗಿ ಸಾಯುವದರ ಶ್ರೇಷ್ಠತೆಯನ್ನು ಅವರು ಹೇಗೆ ವಿವರಿಸುವರು? ಈ ವ್ಯಕ್ತಿಗಳನ್ನು ಜಗತ್ತು ಅತಿದೊಡ್ಡ ನಾಯಕರೆಂದು, ಅತ್ಯುನ್ನತ ಗುಣಗಳ ಐತಿಹಾಸಿಕ ಉದಾಹರಣೆಗಳೆಂದು ತಿಳಿಯುತ್ತದೆ. ಮಾನವರಲ್ಲಿರುವ ಗೌರವದ ಮತ್ತು ಪರಾಕ್ರಮದ ಗುಣಗಳು ಅವುಗಳ ಆಕಸ್ಮಿಕ ಗುಂಪುಕೂಡಿಸುವಿಕೆಯಂತೆ ಕೇವಲ ಪರಿಣಾಮಗಳಾಗಿವೆ. ಬೇರೇ ಯಾವ ವಿವರಣೆಯು ಕೊಡಲ್ಪಡುವದಿಲ್ಲ ಇಲ್ಲವೇ ವಿಶ್ವಕ್ಕೆ ಯಾವುದೇ ಕಾರಣವಿರುವದಿಲ್ಲ. ಹೀಗೆ ಜಗತ್ತಿನಲ್ಲಿಯ ಅರ್ಥದ ಬಗ್ಗೆ ಮಾನವನ ತಿಳುವಳಿಕೆಯು ಕೇವಲ ಅರ್ಥರಹಿತವಾದದ್ದಾಗುತ್ತದೆ. ಅವಿಶ್ವಾಸಿಗಳು ಒಂದು ಸಮಸ್ಯೆಯನ್ನು ತೆಗೆದು ಹಾಕುವಾಗ, ಬಹಳ ಹೆಚ್ಚಾದ ತೊಂದರೆಯಿಂದ ಅವರು ಎದುರಿಸಲ್ಪಡುತ್ತಾರೆ.

## ಕೆಲವು ತಪ್ಪಾದ "ಪರಿಹಾರಗಳು"

ಶ್ರಮೆಯ ಸಮಸ್ಯೆಗಾಗಿ ಸೂಚಿಸಲ್ಪಟ್ಟ ಕೆಲವು ತಪ್ಪಾದ "ಪರಿಹಾರಗಳು" ಯಾವವು?

### "ಶ್ರಮೆಯು ಭ್ರಮೆಯಾಗಿದೆ"

ತತ್ವಜ್ಞಾನದಲ್ಲಿ ಪರಿಪೂರ್ಣವಾದ ಆದರ್ಶವಾದಿಗಳಿಂದ ಹಿಡಿಯಲ್ಪಟ್ಟ ಒಂದು ಪರಿಹಾರವು ಹಾಗೂ ಮೇರಿಬೇಕರ್ ಎಡ್ಡಿ[1] ಅವರಿಂದ ಪ್ರಸಿದ್ಧಿ ಪಡಿಸಲ್ಪಟ್ಟದ್ದು, ಎಲ್ಲಾ ಶ್ರಮೆಯು ಭ್ರಮೆಯಾಗಿದೆ ಎಂಬುದು. ಈ ದೃಷ್ಟಿಕೋನದ ಪ್ರಕಾರವಾಗಿ ನೋವು ಹಾಗೂ ಶ್ರಮೆಯು ನಮ್ಮ ವಕ್ರ ಮನಸ್ಸುಗಳ ಫಲಿತಾಂಶಗಳಾಗಿದ್ದು ಮನಸ್ಸಿನ ಹೊರಗೆ ಅಸ್ತಿತ್ವದಲ್ಲಿರಲಾರವು ಎಂದಾಗಿದೆ. ಕೆಡುಕಿನ ಪ್ರತಿಯೊಂದು ಅನುಭವವು ಕರ್ತೃ ಸಂಬಂಧವಾಗಿದ್ದರೆ, ಆಗ ಅದು ಗಮನಿಸುವಂಥ ಮನಸ್ಸಿನಲ್ಲಿ ಮಾತ್ರವೇ ಅಸ್ತಿತ್ವದಲ್ಲಿರುವುದು. ಹಾಗೂ ಕರ್ಮಪರವಿಷಯದ ನಿಜತ್ವದ ಭಾಗವಾಗಿರುವದಿಲ್ಲ. ಹೀಗೆ ತಪ್ಪಾಗಿ ಯೋಚಿಸಲ್ಪಡುವುದು ಹಾಗೂ ಶ್ರಮೆ ಪಡುವಂಥದ್ದು ಒಂದೇ ಸಂಗತಿಯಾಗಿದೆ. ಒಬ್ಬ ವ್ಯಕ್ತಿಯು ನೋವನ್ನು ಕುರಿತು ತನ್ನ ಯೋಚಿಸುವಿಕೆಯಲ್ಲಿ ತನ್ನನ್ನು ಸರಿಪಡಿಸಿಕೊಂಡ ಕೂಡಲೇ ಅವನ ಶ್ರಮೆಯು ಕಣ್ಮರೆಯಾಗುವುದೆಂದು ಭಾವಿಸಲಾಗುವುದು.

ಜಗತ್ತಿನಲ್ಲಿಯ ಪ್ರತಿಯೊಂದು ದು ಖಕರವಾದ ಸಂಗತಿಯು ಕೇವಲ ಕಾಲ್ಪನಿಕವಾದದ್ದು ಎಂದು ಹೇಳುವುದು ಎಷ್ಟು ಹುಚ್ಚುತನದ್ದಾಗಿದೆ. ಇದು ಹೀಗೆ ಇದ್ದರೆ, ಆಗ ಯಾವಾಗಲೂ ಅಂಥ ವಿಲಕ್ಷಣಗಳನ್ನು ಕಲ್ಪಿಸುವ ಮನಸ್ಸುಗಳೊಂದಿಗೆ ಜಗತ್ತು ತುಂಬಿಕೊಂಡಿರುವುದು. ನಿಜವಾಗಿಯೂ ಯಾವುದೂ ಅಸ್ತಿತ್ವದಲ್ಲಿ ಇಲ್ಲದಿದ್ದರೆ, ಮನಸ್ಸು ಯಾಕೆ ಅಂಥ ಕೆಡಕುಗಳನ್ನು ಕಲ್ಪಿಸಬೇಕು. ಒಂದು ಅಪಘಾತದಲ್ಲಿ ತನ್ನ ದೃಷ್ಟಿಯನ್ನು ಕಳೆದು ಕೊಂಡವನಿಗೆ "ನಿನ್ನ ಕುರುಡು ತನವು ನಿಜವಾದದ್ದಲ್ಲಣಿ ಅದು ನಿನ್ನ ಮನಸ್ಸಿನಲ್ಲಿದೆ" ಎಂದು ಹೇಳುವುದು ಹುಚ್ಚುತನವಾಗಿದೆಯಲ್ಲವೇ? ತಮ್ಮ ಮಗುವನ್ನು ಕಳೆದು ಕೊಂಡ ತಂದೆತಾಯಿಗಳಿಗೆ, "ನಿಮ್ಮ ಮಗು ಸತ್ತು ಹೋಗಿದೆಯೆಂದು ನೀವು ಕೇವಲ ಕಲ್ಪಿಸಿಕೊಳ್ಳುತ್ತೀರಿ. ನಿಮ್ಮ ತೊಂದರೆಯು ಕೇವಲ ನಿಮ್ಮ ಭ್ರಮೆಯಾಗಿದೆಣಿ ನಿಮ್ಮ ಮಗುವು ಸತ್ತಿರುವದಿಲ್ಲ" ಎಂದು ಹೇಳುವದಕ್ಕಿಂತ ನಿರರ್ಥಕವಾದದ್ದು ಬೇರೆ ಯಾವುದಿದೆ.

ಬೈಬಲನ್ನು ನಂಬುವ ಯಾರೇ ಆಗಲಿ ಅವನು ಶ್ರಮೆಯು ನಮ್ಮ ಕರ್ತನಾದ ಯೇಸು ಕ್ರಿಸ್ತನ ಹಣೆಯನ್ನು ಮುಳ್ಳುಗಳು ಚುಚ್ಚಿದಷ್ಟು ಹಾಗೂ ಆತನ ಮಾಂಸವನ್ನು ಮೊಳೆಗಳು

ಹಲಿದಷ್ಟು ಸತ್ಯವಾಗಿದೆ ಎಂದು ತಿಳಿಯುವರು. ನೋವಿನ ಬಗ್ಗೆ ಸುಳ್ಳು ಕಲ್ಪನೆಯನ್ನು ಅಂಗೀಕಲಿಸುವಂತೆ ಯೇಸು ಶ್ರಮೆಹೊಂದಿ ಶಿಲುಬೆಯ ಮೇಲೆ ಮರಣ ಹೊಂದಿದರು ಎಂದು ಶಿಷ್ಯರು ಯೋಚಿಸುವ ತಪ್ಪಿನಲ್ಲಿ ಭ್ರಮೆಗೊಂಡಿದ್ದರು ಹಾಗೂ ಸುವಾರ್ತೆಯು ದುಷ್ಟ ಕಲ್ಪನೆಗಳ ಪರಿಣಾಮವಾಗಿದೆ ಎಂದು ನಾವು ಹೇಳಬಹುದು. ಎರಡೂ ಒಂದೇ ಭಾವನೆಯ ಭಾಗಾಗಳಾಗಿವೆ.

**"ದೇವರು ಮಿತಿಯುಳ್ಳವನಾಗಿದ್ದಾನೆ"**

ಮಿತಿಯುಳ್ಳ ದೇವರ ತತ್ವದಲ್ಲಿ ವಿವರಣೆಯನ್ನು ಕಂಡುಕೊಳ್ಳುವಿಕೆಯ ಪ್ರಯತ್ನಿಸುವಂತೆ ಸಮಸ್ಯೆಯು ಅಂಥ ತೀವ್ರ ಭಾವನೆಗಳಿಂದ ಮುಂದಿನ ಸೂಚನೆಯು ಬರುತ್ತದೆ. ದೇವರು ನೀತಿಯ, ಒಳ್ಳೆಯ ಹಾಗೂ ಶ್ರೇಷ್ಠ ಪ್ರತಿಪಾದಕನಾಗಿದ್ದರೂ ತನ್ನ ಚಿತ್ತವನ್ನು ನೆರವೇರಿಸಲು ಸಾಕಷ್ಟಾಗಿರದವನಾಗಿದ್ದಾನೆ ಎಂಬ ಭಾವನೆ ಇಲ್ಲಿದೆ. ವಿಶ್ವಾಸದಲ್ಲಿ ಆತನು ಹೋರಾಡುತ್ತಿದ್ದುದಕ್ಕೆ ವಿರುದ್ಧವಾಗಿ ಆತನು ದುಷ್ಟ ಶಕ್ತಿಗಳಿಂದ ಮಿತಿಗೊಳಿಸಲ್ಪಟ್ಟಿದ್ದಾನೆ. ಈ ದೃಷ್ಟಿಕೋನವನ್ನು ಇಟ್ಟುಕೊಂಡಿರುವವರು ಇದು ಸೃಷ್ಟಿ ಜೀವಿಯ ತಪ್ಪಲ್ಲ ಆದರೆ ನಮ್ಮನ್ನು ಎದುರಿಸುತ್ತಿರುವುದು ಸೃಷ್ಟಿಕರ್ತನ ಬಲಹೀನತೆ ಆಗಿದೆಯೆಂದು ಯೋಚಿಸುತ್ತಾರೆ. ಆತನ (ದೇವರ) ಚಿತ್ತವು ಸೃಷ್ಟಿಸದೇ ಇದ್ದವುಗಳಿಂದ ದೇವರ ನಿತ್ಯವಾದ ಚಿತ್ತವು ಆತಂಕಗಳನ್ನು ಎದುರಿಸುತ್ತಿದೆ ಹಾಗೂ ಈ ಪರಿಸ್ಥಿತಿಗಳು ದೇವರ ಚಿತ್ತವನ್ನು ಕೈಕೊಳ್ಳುವದಕ್ಕೆ ಆತಂಕವನ್ನೊಡ್ಡುತ್ತವೆ ಎಂದು ಅವರ ತತ್ವಜ್ಞಾನ ಹೇಳುತ್ತದೆ. ದೇವರು ಕೆಡುಕನ್ನು ಎದುರಿಸಲು ಮತ್ತು ಜಗತ್ತನ್ನು ಸಾಧ್ಯವಾದಷ್ಟು ಒಳ್ಳೆಯದನ್ನಾಗಿಡಲು ಮಾಡುವದನ್ನು ಮಾಡಿದ್ದಾನೆ, ಆದರೆ ಆತನು ಮಿತಿಯುಳ್ಳವ ನಾಗಿದ್ದಾನೆಂದು ನಾವು ನಂಬಲೇ ಬೇಕೆಂದು ಅವರು ಬಯಸುತ್ತಾರೆ. ಲೌಕಿಕ ಹೋರಾಟದ ಪರಿಣಾಮಗಳು ಸಂಶಯದಲ್ಲಿರುವದರಿಂದ ದೇವರಿಗೆ ನಮ್ಮ ಸಹಾಯ ಅವಶ್ಯವಿದೆಯೆಂದು ಅವರು ಯೋಚಿಸುತ್ತಾರೆ. ಅವರ ಯೋಚನೆಯಲ್ಲಿ ದೇವರ ಸತತವಾದ ಹೋರಾಟದಿಂದ ಪ್ರತಿಯೊಂದು ಆತ್ಮವು ಹೋರಾಟದಲ್ಲಿ ಆತನ ಬಲಕ್ಕೆ ಕೂಡಿಸುತ್ತದೆ. ಸರಿಯಾದದ್ದು ಜಯಗೊಳಿಸಲು ಸಹಾಯ ಮಾಡುತ್ತದೆ.

ಈ ದೃಷ್ಟಿಕೋನವು ಲೋಕದಲ್ಲಿ ಕೆಡುಕನ್ನು ಲೆಕ್ಕಕ್ಕೆ ಹಿಡಿಯುವದಿಲ್ಲ. ಆದರೆ ಬಾಹ್ಯ ಶಕ್ತಿಗಳು ಆತನನ್ನು ವಿರೋಧಿಸುವ ಕಾರಣದಿಂದ ಆತನು ತನ್ನ ಚಿತ್ತವನ್ನು ನೆರವೇರಿಸಲು ಪೂರ್ಣ ಶಕ್ತನಾಗಿಲ್ಲವೆಂದು ದೇವರ ಹೋರಾಟವನ್ನು ವಿವರಿಸುವಲ್ಲಿ ಮಾತ್ರ ಹೋರಾ ಡುತ್ತಿರುವನು ಎಂಬುದನ್ನು ಕಂಡು ಕೊಳ್ಳುವೆವು. ಬೊಸ್ಟನ್ ಯುನಿವರ್ಸಿಟಿಯ ಇ. ಎಸ್. ಬ್ರೈಟ್‌ಮನ್ ಅವರಿಂದ ನಡಿಸಲ್ಪಟ್ಟ ಹಲವಾರು ಆಧುನಿಕ ತತ್ವ ಜ್ಞಾನಿಗಳು ಈ ದೃಷ್ಟಿಕೋನವನ್ನು ಅಂಗೀಕರಿಸಿದ್ದರೂ ಇದು ಸಮಸ್ಯೆಗೆ ಪರಿಹಾರವಾಗಿ ವಿಶಾಲವಾದ ಬೆಂಬಲವನ್ನು ಪಡೆದು ಕೊಂಡಿರುವದಿಲ್ಲ. ಮಿತಿಯುಳ್ಳ ದೇವರ ತತ್ವವು ದೇವರು ಸರ್ವ ಶಕ್ತನಾಗಿದ್ದಾನೆ ಮತ್ತು "ದೇವರಿಗೆ ಎಲ್ಲಾ ಸಂಗತಿಗಳು ಸಾಧ್ಯವಾಗಿರುವದರಿಂದ" (ಮತ್ತಾಯ 19:26ಬಿ) ಆತನು ತನ್ನ ಸ್ವಂತ ಉದ್ದೇಶಗಳನ್ನು ಜಗತ್ತಿನಲ್ಲಿ ಪೂರ್ಣವಾಗಿ ಸಾಧಿಸಲು ಶಕ್ತನು ಎಂಬ ಬೈಬಲಿನ ಬೋಧನೆಗೆ ವಿರುದ್ಧವಾದದ್ದು ಆಗಿದೆ.

**"ಎಲ್ಲಾ ಶ್ರಮೆಯು ಪಾಪದ ಪರಿಣಾಮವಾಗಿದೆ"**

ಮಾನವ ಶ್ರಮೆಯ ಸಮಸ್ಯೆಗೆ ಮೂರನೆಯ ತಪ್ಪಾದ "ಪರಿಹಾರವು" ಶ್ರಮೆಯು ಯಾವಾಗಲೂ ಒಬ್ಬನ ಪಾಪದ ಕಾರಣವಾಗಿದೆ ಎಂಬ ಭಾವನೆಯಾಗಿದೆ. ಈ ದೃಷ್ಟಿಕೋನ ದಲ್ಲಿರುವ ಒಂದು ಬಲವಾದ ಸತ್ಯದ ವಿಷಯವು ಪಾಪವು ಶ್ರಮೆಯನ್ನು ತರುತ್ತದೆ ಎಂಬುದು.

ಜಗತ್ತಿನಲ್ಲಿ ಇಂದು ಇರುವ ಬಹಳವಾದ ನೋವು ಯುಗಗಳಲ್ಲಿ ದುಷ್ಟತ್ವದ ಹಾಗೂ ದುಷ್ಟ ಉದ್ದೇಶಗಳು ತುಂಬಿದ ಸ್ವಾರ್ಥತೆಯುಳ್ಳ ಜನರ ಹುಚ್ಚು ಕಾರ್ಯಗಳ ಪರಿಣಾಮವಾಗಿದೆ. ನಾವು ತಪ್ಪು ಮಾಡಿ ಅದಕ್ಕಾಗಿ ಶ್ರಮೆಪಡುವವದಾದರೆ, ನಾವು ಯಾಕೆ ಶ್ರಮೆಪಡುತ್ತೇವೆ ಎಂಬುದನ್ನು ಅರ್ಥಮಾಡಿಕೊಳ್ಳಲು ತೊಂದರೆಯು ಇರುವುದಿಲ್ಲ. ಹೀಗಿದ್ದರೂ, ಇದು ಪ್ರತಿಯೊಂದನ್ನೂ ವಿವರಿಸುವದಿಲ್ಲ. ನಿರ್ದೋಷಿಗಳ ಶ್ರಮೆಯನ್ನು ಇದು ವಿವರಿಸುವದಿಲ್ಲ. ಮನುಷ್ಯನ ತೊಂದರೆಗಳು ಅವನ ಗುಣದಲ್ಲಿಯ ಇಲ್ಲವೇ ಅವನ ಜೀವನದಲ್ಲಿಯ ಮಹಾ ತಪ್ಪಿಗಾಗಿ ಶಿಕ್ಷೆಯಂತೆ, ಎಲ್ಲಾ ಶ್ರಮೆಯು ಪಾಪದ ನಿಮಿತ್ತವಾಗಿ ಬಂದದ್ದು ಎಂದು ಹೇಳುವುದು ಸತ್ಯವಾಗಿರುವದಿಲ್ಲ.

ಯೋಬನ ಸ್ನೇಹಿತರು ಅವನ ಶ್ರಮೆಗಳಿಗಾಗಿ ಯಾವುದೋ ಗುಪ್ತ ದುಷ್ಟತ್ವವು ಕಾರಣವಾಗಿದೆ ಎಂದು ಅವನನು ದೂಷಿಸಿದ್ದರಲ್ಲಿ ತಪ್ಪನ್ನು ಮಾಡಿದರು. ಅವನು ನೆಲದ ಮೇಲೆ ಕುಳಿತಿರುವದನ್ನೂ, ಅವನ ದೇಹವು ರೋಗದಿಂದ ಜಜ್ಜಲ್ಪಟ್ಟದ್ದನ್ನೂ, ನೋವಿನಿಂದ ನರಳುತ್ತಿದುದ್ದನ್ನೂ, ಅವನ ಹೆಂಡತಿ ಅವನ ವಿರೋಧವಾಗಿ ತಿರುಗಿಬಿದುದ್ದನ್ನೂ, ಅವನ ಮಕ್ಕಳು ಸತ್ತು ಹೋದದ್ದನ್ನೂ ಮತ್ತು ಅವನ ಆಸ್ತಿ ಇಲ್ಲವಾಗಿ ಹೋದದ್ದನ್ನೂ ಅವರು ನೋಡಿದರು. ಅವನ ಮನೆಯವರ ಮೇಲೆ ವಿಪತ್ತು ಫಕ್ಕನೇ ಬಂದಿತ್ತು. “ಯೋಬನೇ, ನೀನು ನಿಶ್ಚಯವಾಗಿ ಯಾವುದೋ ಭಯಂಕರ ಪಾಪ ಮಾಡಿರುವಿ, ಇಲ್ಲವೇ ಅಷ್ಟು ಬಹಳವಾಗಿ ಶ್ರಮೆ ಪಡುತ್ತಿರಲಿಲ್ಲ” ಎಂದು ಅವನ ಸ್ನೇಹಿತರು ಹೇಳಿದರು. “ಮಾನಸಾಂತರ ಪಡು, ಅದನ್ನು ಅರಿಕೆಮಾಡು, ಹಾಗೂ ಒಂದುವೇಳೆ ದೇವರು ಇನ್ನೊಂದು ಸಲ ತನ್ನ ಮುಖವನ್ನು ನಿನ್ನ ಕಡೆಗೆ ತಿರುಗಿಸಬಹುದು” ಎಂದರು. ಯೋಬನ ಪುಸ್ತಕದ ಹೆಚ್ಚಿನ ಭಾಗವು ಈ ದೂರುಗಳಿಗೆ ವಿರೋಧಿಸಿದ ಸಂಗತಿಗಳಿಂದ ತುಂಬಿಕೊಂಡಿದೆ. ಯೋಬನು ತನ್ನ ನೀತಿಯನ್ನು ಪ್ರತಿಪಾದಿಸಿಕೊಂಡನು ಮತ್ತು ತನ್ನ ಶ್ರಮೆಯ ಸುಳ್ಳು ದೃಷ್ಟಿಕೋನವನ್ನು ಸ್ವೀಕರಿಸುವದನ್ನು ನಿರಾಕರಿಸಿದನು. ಅಂಥ ಹೋರಾಟದೊಳಗಿಂದ ಅವನ ಸಮಸ್ಯೆಗಳಿಗೆ ಆಳವಾದ ಜ್ಞಾನವು ಕಂಡುಬಂದಿದೆ.

ಪಿಲಾತನು ಯಾರ ರಕ್ತವನ್ನು ಅವನ ಯಜ್ಞಗಳೊಂದಿಗೆ ಮಿಶ್ರ ಮಾಡಿದನೋ, ಅವರು ದೇಶದಲ್ಲಿಯ ಇತರರಿಗಿಂತ ಹೆಚ್ಚು ದುಷ್ಟರಾಗಿರಲಿಲ್ಲ ಎಂದು ಯೇಸು ಹೊಸ ಒಡಂಬಡಿಕೆಯಲ್ಲಿ ತೋರಿಸಿದನು:

> ಆ ಗಲಿಲಾಯದವರು ಅಂಥ ಕೊಲೆಯನ್ನು ಅನುಭವಿಸಿದ್ದರಿಂದ ಅವರನ್ನು ಎಲ್ಲಾ ಗಲಿಲಾಯದವರಿಗಿಂತ ಪಾಪಿಷ್ಠರೆಂದು ಭಾವಿಸುತ್ತೀರೋ? ಹಾಗೆ ಭಾವಿಸಬಾರದೆಂದು ನಾನು ಹೇಳುತ್ತೇನೆ. ನೀವು ಮಾನಸಾಂತರ ಪಡದಿದ್ದರೆ, ನೀವೆಲ್ಲರೂ ಅವರಂತೆಯೇ ನಾಶವಾಗಿ ಹೋಗುವಿರಿ, ಇಲ್ಲದೆ ಸಿಲೊವಾಮಿನಲ್ಲಿ ಬುರುಜುಬಿದ್ದು ಸತ್ತ ಆ ಹದಿನೆಂಟು ಜನರು ಯೆರೂಸಲೇಮಿನಲ್ಲಿ ವಾಸವಾಗಿರುವ ಎಲ್ಲಾ ಮನುಷ್ಯರಿಗಿಂತಲೂ ಅಪರಾಧಿಗಳು ಎಂದು ಭಾವಿಸುತ್ತೀರೋ? ಹಾಗಲ್ಲವೆಂದು ನಿಮಗೆ ಹೇಳುತ್ತೇನೆ. ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ ನೀವೆಲ್ಲರೂ ಅವರಂತೆ ಹಾಳಾಗಿ ಹೋಗುವಿರಿ ಎಂದು ಹೇಳಿದನು (ಲೂಕ 13:2-5).

ಇದಕ್ಕಿಂತಲೂ ಹೆಚ್ಚು ಸರಳವಾಗಿರದ ಭಾಷೆಯಲ್ಲಿ ನಮ್ಮ ಕರ್ತನು ಶ್ರಮೆಗಳು ಯಾವಾಗಲೂ ಶ್ರಮೆತಾಳುವವನ ದುಷ್ಟತನದ ಕಾರಣದಿಂದ ಬಂದವುಗಳು ಎಂಬ ಭಾವನೆಯನ್ನು ತಿರಸ್ಕರಿಸಿದನು.

ಇನ್ನೊಂದು ಸಂದರ್ಭದಲ್ಲಿ ಒಬ್ಬ ಹುಟ್ಟು ಕುರುಡನನ್ನು ಎದುರಿಸಿದಾಗ, ಶಿಷ್ಯರು

ಯೇಸುವನ್ನು ಪ್ರಶ್ನಿಸಿದರು: "ಗುರುವೇ, ಇವನು ಕುರುಡನಾಗಿ ಹುಟ್ಟಿರುವದಕ್ಕೆ ಯಾರು ಪಾಪ ಮಾಡಿದರು? ಇವನೋ? ಇವನ ತಂದೆ ತಾಯಿಗಳೋ?" ಯೇಸು ಅದಕ್ಕೆ "ಇವನೂ ಪಾಪ ಮಾಡಲಿಲ್ಲ, ಇವನ ತಂದೆ ತಾಯಿಗಳೂ ಪಾಪ ಮಾಡಲಿಲ್ಲಣಿ ದೇವರ ಕ್ರಿಯೆಗಳು ಇವನಲ್ಲಿ ತೋರಿಬರುವದಕ್ಕೆ ಇದಾಯಿತು" (ಯೋಹಾನ 9:2, 3) ಎಂದು ಹೇಳಿದನು. ಅವನ ಕುರುಡು ತನಕ್ಕೆ ಅವನ ತಂದೆತಾಯಿಗಳ ಇಲ್ಲವೇ ಕುರುಡನಾಗಿ ಜನಿಸಿದವನ ಪಾಪವು ಕಾರಣವಾಗಿರಲಿಲ್ಲ. ಕ್ರಿಸ್ತನು ತಾನೇ ಶ್ರಮೆಪಟ್ಟದ್ದು ಎಲ್ಲಾ ಶ್ರಮೆಗಳು ಒಬ್ಬನ ಪಾಪಗಳಿಗಾಗಿ ಬಂದಿರುವ ಶಿಕ್ಷೆಯಾಗಿರುವುದು ಎಂಬ ಭಾವನೆಯನ್ನು ತಳ್ಳಿ ಹಾಕುತ್ತದೆ. ಯಾಕಂದರೆ ಆತನು "ಯಾವ ಪಾಪ ಮಾಡಲಿಲ್ಲ" (1 ಪೇತ್ರ 2:22) ಎಂದು ಪರಿಶುದ್ಧ ಬರಹಗಳು ಸ್ಪಷ್ಟವಾಗಿ ಹೇಳುತ್ತವೆ. ಹೀಗಿದ್ದರೂ ಆತನು ನಮ್ಮನ್ನು ವಿಮೋಚಿಸಲಿಕ್ಕಾಗಿ ನಿರ್ದೋಷಿಯಾದಾತನು ಅಪರಾಧಿಯಾಗಿ ಶ್ರಮೆಪಟ್ಟನು. ಪಾಪವು ಶ್ರಮೆಗೆ ಕಾರಣ ವಾಗ ಬಹುದಾದಾಗ, ಅದು ಪ್ರತಿಯೊಂದು ಶ್ರಮೆಯ ಕಾರಣವನ್ನು ವಿವರಿಸುವದರಲ್ಲಿ ಇಲ್ಲವೇ ಶ್ರಮೆಗಾಗಿ ವಿವರಣೆಯಂತೆ ಬೈಬಲು ಅದನ್ನು ಸ್ವೀಕರಿಸುವದಿಲ್ಲ. ಕ್ರೈಸ್ತರಿಗಾಗಿ ಇದು ವಿಷಯವನ್ನು ಪರಿಷ್ಕರಿಸುತ್ತದೆ.

ಈಗ ನಾವು ಕೆಲವು ತಪ್ಪಾದ "ಪರಿಹಾರಗಳನ್ನು" ಗಮನಿಸಿದ್ದೇವೆ. ಮಾನವ ಶ್ರಮೆಯ ಪೂರ್ಣ ಪರಿಹಾರಕ್ಕೆ ತಲುಪಿದ್ದೇನೆಂದು ಯಾವನೂ ಹೇಳಲಾರನು ಎಂಬುದನ್ನು ನಾವು ಒಪ್ಪಿಕೊಳ್ಳತಕ್ಕದ್ದು. ಪ್ರಶ್ನೆಯ ಅನೇಕ ಸಂಗತಿಗಳು ನಮ್ಮ ತಿಳುವಳಿಕೆಯ ಶಕ್ತಿಗಳನ್ನು ದಾಟಿಹೋಗುತ್ತವೆ. ಈ ಒಂದು ಪಾಠದಲ್ಲಿ ಮುಖ್ಯ ಪ್ರಸ್ತಾಪವನ್ನು ಸಂಪೂರ್ಣವಾಗಿ ವಿವರಿಸಲು ಸಾಧ್ಯವಾಗುವದಿಲ್ಲ. ಹೀಗಿದ್ದರೂ ಇಲ್ಲಿ ಸೂಚಿಸಿದ ಕೆಲವು ಭಾವನೆಗಳು ನಾವು ಸಹಿಸುವ ಮತ್ತು ಇತರರ ಜೀವಿತಗಳಲ್ಲಿ ನಾವು ನೋಡುವ ಶ್ರಮೆಗಳ ಮೇಲೆ ನಮಗಾಗಿ ಬೆಳಕು ಕೊಡುತ್ತವೆ.

ನಂಬಿಕೆಯನ್ನು ಮತ್ತು ಶ್ರಮೆಯನ್ನು ಒಂದುಗೂಡಿಸಲು ಪ್ರಯತ್ನಿಸುವವರು ಸಮಸ್ಯೆಯನ್ನು ಈ ರೀತಿಯಲ್ಲಿ ಹೇಳುತ್ತಾರೆ: "ದೇವರು ಒಳ್ಳೆಯವನಾಗಿದ್ದರೆ, ಆತನು ಜನರನ್ನು ಸಂತೋಷದಲ್ಲಿಡಲು ಬಯಸುವನುಣಿ ಹಾಗೂ ಆತನು ಸರ್ವಶಕ್ತನಾಗಿದ್ದರೆ, ತಾನು ಬಯಸುವಂಥದ್ದನ್ನು ಮಾಡಲು ಆತನು ಶಕ್ತನಾಗಿರುವನು. ಆತನಿಂದ ಸೃಷ್ಟಿಸಲ್ಪಟ್ಟವರು ದು ಖವುಳ್ಳವರಾಗಿದುದ್ದರಿಂದ, ದೇವರಿಗೆ ಬಲದ ಹಾಗೂ ಒಳ್ಳೆಯ ತನದ ಇಲ್ಲವೇ ಎರಡರ ಕೊರತೆ ಇದ್ದಿರಬೇಕು."

## ದೇವರ ಸರ್ವಶಕ್ತಿ ಹಾಗೂ ಒಳ್ಳೆಯತನ

ದೇವರ ಸರ್ವಶಕ್ತಿಯ ಮತ್ತು ಮಾನವನ ಕಡೆಗೆ ಇರುವ ಆತನ ಮಹಾ ಪ್ರೀತಿಯ ನೂತನ ಮೌಲ್ಯವ್ಯಾಪನವು ನಮ್ಮ ಮನಸ್ಸುಗಳಲ್ಲಿರುವ ಕೆಲವು ತಪ್ಪು ಭಾವನೆಗಳನ್ನು ತೆಗೆದು ಹಾಕುವುದು. "ದೇವರೊಂದಿಗೆ ಎಲ್ಲಾ ಸಂಗತಿಗಳು ಸಾಧ್ಯವಾಗಿವೆ" (ಮತ್ತಾಯ 19:26) ಎಂದು ಹೇಳುವಲ್ಲಿ ಬೈಬಲಿನ ಅರ್ಥ ಯಾವುದು? ದೇವರು ತಾನು ಬಿಚ್ಚಿದ ಗಂಟನ್ನು ದೇವರು ಕಟ್ಟುವನು ಎಂದು ಅದರ ಅರ್ಥವಾಗುವುದೋ? ಚೌಕೋನದ ವರ್ತುಳವನ್ನು ದೇವರು ಸೃಷ್ಟಿಸಬಲ್ಲನೋ? ಅಂಥ ಪ್ರಶ್ನೆಗಳನ್ನು ಕೇಳುವಲ್ಲಿ ಜನರು ಪದಗಳಿಂದ ಆಟವಾಡುತ್ತಿರುತ್ತಾರೆ. ಈ ರೀತಿಯಲ್ಲಿ ಪದಗಳನ್ನು ಕೂಡಿಸುವ ಸಂಗತಿಯು ಏನನ್ನಾದರೂ ಹೇಳುವುದು ಎಂದೂ ಅರ್ಥವಾಗುವದಿಲ್ಲ. ಎರಡು ಪರಸ್ಪರ ಪ್ರತ್ಯೇಕ ವಾಗಿರುವ ಸಂಗತಿಗಳು ಮಾಡಲ್ಪಡುವದಿಲ್ಲ, ಅಥವಾ ದೇವರ ಜಗತ್ತು ಅಸಂಗತವಾ ದದ್ದಾಗುತ್ತದೆ. ಸರ್ವಶಕ್ತಿಯೆಂದರೆ ಯಾರಾದರೂ ಕಲ್ಪಿಸ ಬಹುದಾದ ಯಾವುದೇ

ಹುಚ್ಚು ಸಂಗತಿಯನ್ನು ದೇವರು ಮಾಡುವನೆಂದು ಅರ್ಥವಾಗುವದಿಲ್ಲ. ಅದರ ಬದಲು ಅವುಗಳೊಂದಿಗೆ ಸಂಪೂರ್ಣವಾಗಿ ಸಾಮರಸ್ಯದಲ್ಲಿ ಇರುವ ಆತನ ಸ್ವಭಾವ ಇತರ ಲಕ್ಷಣಗಳಿಗೆ ಸಂಬಂಧಿಸಿ ಅದನ್ನು ಅರ್ಥಮಾಡಿಕೊಳ್ಳಬೇಕು. ದೇವರು ತನ್ನ ಸ್ವಭಾವಕ್ಕೆ ಮತ್ತು ತನ್ನ ಚಿತ್ತಕ್ಕೆ ಅನುಗುಣವಾಗಿ ಇರುವದನ್ನು ಪೂರ್ತಿಗೊಳಿಸಲಿಕ್ಕೆ ದೇವರು ಸರ್ವಶಕ್ತನಾಗಿದ್ದಾನೆ. ದೇವರು ತಾನು ದೇವರಾಗಿರುವದರಿಂದ ಕೆಲವು ಸಂಗತಿಗಳನ್ನು ಮಾಡಲಾರನು ಎಂದು ಬೈಬಲ್ ಹೇಳುತ್ತದೆ. ದೇವರು ಸುಳ್ಳು ಹೇಳ ಲಾರನು (ಇಬ್ರಿಯ 6:18). ಆತನು ಯಾರನ್ನೂ ಕೆಟ್ಟದ್ದರಿಂದ ಶೋಧಿಸಲಾರನು, ಇಲ್ಲವೇ ಶೋಧಿಸಲ್ಪಡಲಾರನು (ಯಾಕೋಬ 1:13) ಮತ್ತು ಮೆಚ್ಚಿಕೆಯೊಂದಿಗೆ ಆತನು ದುಷ್ಟನನ್ನು ನೋಡಲಾರನು (ಹಬಕ್ಕೂಕ 1:13). ಈ ಸಂಗತಿಗಳನ್ನು ಮಾಡಲಿಕ್ಕೆ ಆತನ ಸ್ವಭಾವವು ಅತಿಕ್ರಮಿಸಲ್ಪಡುವದಿಲ್ಲ.

ಸರ್ವಶಕ್ತನಾದ ದೇವರು ಮಾನವನನ್ನು ಆಯ್ಕೆಯ ಶಕ್ತಿಯೊಂದಿಗೆ, ಅವನ ಜೀವನದಲ್ಲಿ ತೀರ್ಮಾನಗಳನ್ನು ಮಾಡಲಿಕ್ಕೆ ಸ್ವೇಚ್ಛಾ ನಿರ್ಣಯವನ್ನು ಅಭ್ಯಾಸ ಮಾಡುವವನನ್ನಾಗಿ ಸೃಷ್ಟಿಸಿದ್ದಾನೆ. ಮನುಷ್ಯನು ಸ್ವೇಚ್ಛಾ ಚಿತ್ತವನ್ನು ರೂಢಿಸಲು ಆತನು ಅವಕಾಶ ಒದಗಿಸುವಲ್ಲಿ ದೇವರು ತನ್ನ ಸ್ವಂತ ಚಿತ್ತದ ಮೇಲೆ ಮಿತಿಯನ್ನು ಹಾಕಿಕೊಂಡಿದ್ದಾನೆ. ದೇವರ ಸರ್ವಶಕ್ತಿಯು, ಈ ಜಗತ್ತಿನಲ್ಲಿ ಅಭ್ಯಾಸ ಮಾಡಳು ಸ್ವೇಚ್ಛಾ ಚಿತ್ತದೊಂದಿಗೆ ಮನುಷ್ಯನನ್ನು ಸೃಷ್ಟಿಸುವದರಿಂದ ದೇವರು ತನ್ನನ್ನು ತಾನೇ ಮಿತಿಗೊಳಿಸಿಕೊಂಡಿರುವ ಸಂಗತಿಯಿಂದ ದೇವರ ಸರ್ವಶಕ್ತಿಗೆ ಗಂಡಾಂತರ ವಿರುವದಿಲ್ಲ. ದೇವರು ತನ್ನ ಮೇಲೆ ಹಾಕಿಕೊಂಡಿರುವ ಈ ಮಿತಿಯು ಯಾವುದೇ ಹೊರಗಿನ ಒತ್ತಡವನ್ನು ಒಳಗೊಂಡಿರುವದಿಲ್ಲ. ಆದರೆ ಆತನ ಸ್ವಂತ ಸ್ವಭಾವದಿಂದ ಹೊರಟು ಬಂದಿದೆ.

ಇದು ಶ್ರಮೆಯ ಪರಿಣಾಮದೊಂದಿಗೆ ಜನರು ತಪ್ಪಾದ ಆಯ್ಕೆ ಮಾಡಬಹುದೆಂದು ತಿಳಿದೂ, ಸ್ವೇಚ್ಛಾ ಚಿತ್ತದೊಂದಿಗೆ ದೇವರು ಯಾಕೆ ಮಾನವನನ್ನು ಸೃಷ್ಟಿಸಿದನೆಂದು ಒಬ್ಬನು ಕೇಳಿದರೆ, ಅದಕ್ಕೆ ಒಂದೇ ಒಂದು ಉತ್ತರವಿರುವುದು: ನಾವು ಆತನನ್ನು ಮನಸ್ಸಿನಿಂದ ಸೇವೆಮಾಡುವದಕ್ಕೆ ಇಲ್ಲವೇ ಆತನನ್ನು ತಿರಸ್ಕರಿಸುವದಕ್ಕೆ ನಮಗೆ ಸ್ವತಂತ್ರ ಕೊಡಲು ಮತ್ತು ನಮ್ಮನ್ನು ವ್ಯಕ್ತಿಗಳಂತೆ ನಡಿಸಿಕೊಳ್ಳುವದರಲ್ಲಿ ಗಂಡಾಂತರ ತೆಗೆದು ಕೊಳ್ಳಲಿಕ್ಕೆ ದೇವರು ತನ್ನ ಮಿತಿಯಿಲ್ಲದ ಜ್ಞಾನದಲ್ಲಿ ಮತ್ತು ಪ್ರೀತಿಯಲ್ಲಿ ಇಷ್ಟವುಳ್ಳ ವನಾಗಿದ್ದನು. ತನ್ನಂತೆ ನಮ್ಮನ್ನು ನೈತಿಕವಾಗಿ ಹಾಗೂ ಆತ್ಮಿಕವಾಗಿ ಮಾಡಲಿಕ್ಕಾಗುವಂತೆ ಆತನು ಗಂಡಾಂತರವನ್ನು ತೆಗೆದು ಕೊಂಡನು. ದೇವರು ಮನುಷ್ಯನೊಂದಿಗೆ ಒತ್ತಾಯಕ್ಕಿಂತ ಮನವೊಲಿಸುವದನ್ನು ಉಪಯೋಗಿಸಿ, ಮಾನವ ಜೀವಿಗಳ ಮನಸ್ಸುಗಳಿಗೆ ಮತ್ತು ಚಿತ್ತಗಳಿಗೆ ಮನವಿ ಮಾಡುವದರಿದ ಕಾರ್ಯಸಾಧಿಸುವನು. ಆದುದರಿಂದ, ಜಗತ್ತಿನಲ್ಲಿಯ ಅನೇಕ ಕೆಡಕುಗಳು ದೇವರ ಮಾರ್ಗವನ್ನು ತಿರಸ್ಕರಿಸಿದ ಕಠಿಣ ಚಿತ್ತವಿರುವವರ ಮುಖಾಂತರ ಜಗತ್ತಿನಲ್ಲಿ ಬಂದಿರುವವು. ಚಿತ್ತಸ್ವಾತಂತ್ರ್ಯಕ್ಕೆ ಯಾವುದೇ ಅರ್ಥವಿದ್ದರೆ, ಆಗ ದೇವರು ಸಹ ಒಬ್ಬನ ಜೀವಿತದಲ್ಲಿ ಪ್ರವೇಶಿಸಿ, ತಾನು ಅಪೇಕ್ಷಿಸಿದ್ದರಿಂದ ಸುಮ್ಮನೇ ತನ್ನನ್ನು ಹಿಂಬಾಲಿಸಲು ಅವನ ಇಚ್ಛೆಗೆ ವಿರೋಧವಾಗಿ ಅವನನ್ನು ಒತ್ತಾಯ ಮಾಡಲಾರನು. ತೀರ್ಮಾನವು ವ್ಯಕ್ತಿಯೊಂದಿಗೆ ಇರುತ್ತದೆ, ಮನುಷ್ಯನ ಆಯ್ಕೆಯ ಸ್ವಾತಂತ್ರ್ಯವನ್ನು, ಅವನ ಕಾರ್ಯಗಳ ಮತ್ತು ತೀರ್ಮಾನಗಳ ನೈತಿಕ ಜವಾಬ್ದಾರಿಕೆಯನ್ನು ಹಾಳುಮಾಡುವಂಥ ದೇವರ ಶಕ್ತಿಯ ಯಾವುದೇ ತತ್ವವು ದೇವರ ವಾಕ್ಯದ ಬೋಧನೆಗಳಿಗೆ ಅನುಗುಣವಾಗಿ ಇರುವದಿಲ್ಲ.

ದೇವರನ್ನು ಪ್ರೀತಿಸ್ವರೂಪನೆಂದು ನಾವು ಮಾತಾಡುವದರಿಂದ, ಇಂದು ಜನರು

ದೇವರನ್ನು ಒಂದು ರೀತಿಯ ವಿಶ್ವದ ಸಾಂಟಾಕ್ಲಾಸ್‌ನಂತೆ ಇಲ್ಲವೇ ಅಜ್ಜನಂತೆ ಚಿತ್ರಿಸುತ್ತಾರೆ. ಆತನಿಂದ ಸೃಜಿಸಲ್ಪಟ್ಟವರು ಬಯಸಿದ್ದನ್ನು ಕೊಡಬೇಕು ಹಾಗೂ ಭೂಲೋಕವು ಸಂಪೂರ್ಣವಾಗಿ ಆನಂದದಿಂದ ಇರಬೇಕೆಂಬುದೆ ದೇವರ ಮುಖ್ಯ ಲಕ್ಷ್ಯ ಎಂದು ಅವರು ನಂಬುತ್ತಾರೆ. ಪ್ರೀತಿಯನ್ನು ಹಾಳುಮಾಡುವದರಿಂದಾದ ಎಂಥಾ ತತ್ವವಿದಾಗಿರುವುದು! ಜೀವನದಲ್ಲಿಯ ಅನುಭವಗಳು ಈ ಕನಸನ್ನು ಹಾಳುಮಾಡುವಾಗ ಅನೇಕರು, “ನಾವು ಕೇಳುವದನ್ನು [ಇಲ್ಲವೇ ನನಗೆ ಉತ್ತಮವಾದದ್ದು ಯಾವುದೆಂದು ಯೋಚಿಸುವದನ್ನು] ಕೊಡದಂಥಾ ದೇವರನ್ನು ನಂಬಲಾರೆನು” ಎಂದು ಹೇಳುತ್ತಾರೆ. ಜಾಗರೂಕತೆಯ ಅಧ್ಯಯನದ ನಂತರ, ತನ್ನ ಜನರಿಗಾಗಿರುವ ದೇವರ ಪ್ರೀತಿಯನ್ನು ವಿವರಿಸಲು ನಮ್ಮ ತಂದೆಯನ್ನು ಕರುಣಾಮಯಿಯಾದ ಅಜ್ಜನಂತೆ ಬೈಬಲಿನಲ್ಲಿ ಉಪಯೋಗಿಸಲ್ಪಟ್ಟ ಸಂಕೇತಗಳೂ ಉಪಮೆಗಳೂ ಇರುವದಿಲ್ಲ ಎಂದು ಕ್ರೈಸ್ತನು ತಿಳಿದು ಕೊಂಡಿದ್ದಾನೆ.

ಮಣ್ಣಿನ ಪಾತ್ರೆಗಳನ್ನು ಮಾಡಲು ಜಾಗರೂಕತೆಯಿಂದ ಶ್ರಮೆವಹಿಸಿ ಕೆಲಸ ಮಾಡುವ ಕುಂಬಾರನಂತೆ ದೇವರು ಚಿತ್ರಿಸಲ್ಪಟ್ಟಿದ್ದಾನೆ. ತನ್ನ ಅತೀ ಶ್ರೇಷ್ಠ ಕೆಲಸವಾಗುವಂತೆ ಸುಂದರವಾದ ದೇವಾಲಯವನ್ನು ಕಟ್ಟಲು ಕಲ್ಲುಗಳನ್ನು ಕಲೆಯಿಂದ ರೂಪಿಸಿ ಒಂದರ ಮೇಲೆ ಒಂದನ್ನು ಇಡುವ ಕಟ್ಟಡ ಕಟ್ಟುವವನಂತೆ ಆತನು ಇದ್ದಾನೆ. ಗಂಡಾಂತರಗಳಿಂದ ತನ್ನ ಮಂದೆಯನ್ನು ಕಾಪಾಡುವದಕ್ಕಾಗಿ ಸಮರ್ಪಿಸಿಕೊಂಡ ಕುರುಬನಂತೆ ಆತನಿದ್ದಾನೆ. ತಾನು ಆನಂದಿಸುವ ಮಕ್ಕಳನ್ನು ಶಿಕ್ಷಿಸುತ್ತ ಸರಿಪಡಿಸುವದರಲ್ಲಿ ಆತನು ಆಸಕ್ತನಾಗಿದ್ದಾನೆ. ದೇವರು ಯಾವಾಗಲೂ ಜನರ ಮೇಲೆ ಪ್ರೀತಿಯಿಂದ ಲಕ್ಷ್ಯವಿಡುವವನಂತೆ ಪರಿಶುದ್ಧ ಬರಹಗಳಲ್ಲಿ ಚಿತ್ರಿಸಲ್ಪಟ್ಟಿದ್ದಾನೆ. ಈ ಪ್ರೀತಿಯು ನಮಗೆ ನೋವನ್ನು ಉಂಟುಮಾಡುತ್ತದೆ. ಯಾಕಂದರೆ ಆತನ ಪವಿತ್ರ ಕಣ್ಣು ನಮ್ಮಲ್ಲಿ ಆತನ ಮನಸ್ಸನ್ನು ನೋಯಿಸುವಂಥ ಮತ್ತು ಆತನ ಶುದ್ಧತೆಯನ್ನು ಎದುರಿಸುವಂಥ ಸಂಗತಿಗಳನ್ನು ಕಂಡುಕೊಳ್ಳುತ್ತದೆ. ನಮ್ಮನ್ನು ಹೆಚ್ಚು ಪ್ರೀತಿಸುವಂಥ ವ್ಯಕ್ತಿಗಳನ್ನಾಗಿ, ಆತನ ಶುದ್ಧ ಹಾಗೂ ಪವಿತ್ರ ಸ್ವಭಾವದವರನ್ನಾಗಿ ಮಾಡಲು ದೇವರು ನಮ್ಮೊಂದಿಗೆ ಕೆಲಸಮಾಡಬೇಕು. ಬಲಹೀನತೆಯ ಮೇಲೆ ಮತ್ತು ಜಯಗಳೊಂದಿಗೆ ಆತನು ಸಂತೋಷಪಟ್ಟರೂ, ನಮ್ಮಲ್ಲಿ ಇರಬೇಕಾದ ಒಳ್ಳೆಯದು ಇಲ್ಲದಿರುವವರೆಗೆ ಆತನು ತೃಪ್ತನಾಗಿರುವದಿಲ್ಲ, ನಾವು ಆತನೊಂದಿಗೆ ನಿತ್ಯತ್ವವನ್ನು ಕಳೆಯಲಿಕ್ಕಾಗುವಂತೆ, ಆತನು ನಮ್ಮನ್ನು ಶಿಕ್ಷಿಸುತ್ತಾನೆ, ತರಬೇತುಗೊಳಿಸುತ್ತಾನೆ ಹಾಗೂ ಸಿದ್ಧಪಡಿಸುತ್ತಾನೆ. ದೇವರ ಪ್ರೀತಿಯ ಯಾವುದೇ ತತ್ವವು ಆತನಿಂದ ಶಿಕ್ಷಿಸುವುದು ಇಲ್ಲದೇ ಪೂರ್ತಿಯಾದದ್ದಾಗಿರುವದಿಲ್ಲ. ನಮ್ಮ ಮೇಲೆ ಆತನು ಇಟ್ಟ ಲಕ್ಷ್ಯವು ಆತನು ನಮ್ಮನ್ನು ಎಷ್ಟು ಪ್ರೀತಿಸುತ್ತಾನೆ ಮತ್ತು ನಾವು ಆತನ ಪ್ರಿಯ ಕುಮಾರನೂ ನಮ್ಮ ಕರ್ತನೂ ಆಗಿರುವ ಯೇಸುಕ್ರಿಸ್ತನಂತೆ ಆಗಬೇಕೆಂದು ಎಷ್ಟು ಆಳವಾಗಿ ಚಿಂತಿಸುವನು ಎಂಬುದನ್ನು ತೋರಿಸುತ್ತದೆ.

## ವಿಶ್ವದ ಸಹಜಗುಣ

ದೇವರ ಯೋಜನೆಯಲ್ಲಿ ಶ್ರಮೆಯ ಸ್ಥಾನವನ್ನು ಅರ್ಥಮಾಡಿಕೊಳ್ಳುವಲ್ಲಿ ನಮಗೆ ಸಹಾಯ ಮಾಡಬಹುದಾದ ಇನ್ನೊಂದು ಸತ್ಯವು ವಿಶ್ವದ ಸ್ವಭಾವದಲ್ಲಿಯೇ ಇರುತ್ತದೆ. ನೈಸರ್ಗಿಕ ಜಗತ್ತಿನ ಗುಣಲಕ್ಷಣಗಳಲ್ಲಿ ಹೆಚ್ಚಾಗಿ ಗುರುತಿಸಲ್ಪಟ್ಟವುಗಳಲ್ಲಿ ಒಂದು ಅದರ ಏಕರೂಪತೆ. ವಿಜ್ಞಾನವು ತನ್ನ ವಿವಿಧ ರೂಪಗಳಲ್ಲಿ ನೈಸರ್ಗಿಕ ಜಗತ್ತಿನ ಕ್ರಮಪ್ರಕಾರವಾದ ತತ್ವದ ಮೇಲೆ ಕಟ್ಟಲ್ಪಟ್ಟಿದೆ. ಏಕರೀತಿಯಲ್ಲಿ ಪ್ರಕೃತಿಯಲ್ಲಿರುವ

ವಸ್ತುವಿನ ಪ್ರವೃತ್ತಿಯು ನೈಸರ್ಗಿಕ "ನಿಯಮಗಳನ್ನು" ಹೇಳಬಹುದು. ನಿಸರ್ಗದಲ್ಲಿಯ ಈ "ನಿಯಮಗಳು" (ಇಲ್ಲವೇ ಏಕರೂಪದ ತತ್ವಗಳು) ಮನುಷ್ಯರಿಗೆ ಜೀವಿಸಲು, ಭೂಲೋಕವನ್ನು ವಶಪಡಿಸಿಕೊಳ್ಳಲು ಮತ್ತು ಅವುಗಳ ಶಕ್ತಿಗಳನ್ನು ತಮ್ಮ ಸ್ವಂತ ಕ್ಷೇಮಕ್ಕಾಗಿ ಉಪಯೋಗಿಸಲು ಶಕ್ತರನ್ನಾಗಿ ಮಾಡುವುದು. ಪ್ರಕೃತಿವಸ್ತುವಿನ ಅದೇ ಏಕರೂಪಗಳು ಒಳ್ಳೇ ಜನರಿಗೆ ಒಳ್ಳೇ ಈ ಉದ್ದೇಶಗಳಿಗಾಗಿ ಉಪಯೋಗಿಸಲು ಅವಕಾಶಗಳನ್ನು ಒದಗಿಸುವಂಥದ್ದು, ಕೆಟ್ಟ ಜನರು ದುಷ್ಟ ಉದ್ದೇಶಗಳಿಗಾಗಿ ಪ್ರಕೃತಿ ವಸ್ತುವನ್ನು ಉಪಯೋಗಿಸುವಂತೆ ಶಕ್ತರನ್ನಾಗಿ ಮಾಡುವುದು. ಕಬ್ಬಿಣವು ಶಿಕ್ಷಣ, ಸಂಸ್ಕೃತಿ, ಹಾಗೂ ಆರಾಧನೆಯ ಕಟ್ಟಡಗಳಿಗೆ ಉಪಯುಕ್ತವಾಗಿರುವುದು. ಇದು ಅವರು ಕೈಕೊಳ್ಳುವ ಕಾರ್ಯವು ಅನ್ಯಾಯವಾದದ್ದಾಗಿದ್ದರೂ ಜನರು ಯುದ್ಧ ಮಾಡಲು ಆಯುಧಗಳನ್ನು ಇದರಿಂದ ತಯಾರಿಸಬಹುದು.

ಉದಾಹರಣೆಯಾಗಿ, ಬೆಂಕಿಯು ಯೋಗ್ಯವಾಗಿ ಉಪಯೋಗಿಸಲ್ಪಟ್ಟಾಗ ಮನುಷ್ಯನಿಗಾಗಿ ಅದ್ಭುತಕರವಾದ ಸಾಧನವಾಗುತ್ತದೆ. ಅದು ಅವನ ವಾಸಸ್ಥಾನಗಳನ್ನು ಬೆಚ್ಚಗಿಡುತ್ತದೆ, ಅವನ ಆಹಾರವನ್ನು ಬೇಯಿಸುತ್ತದೆ ಮತ್ತು ಕಾರ್ಖಾನೆಗಳನ್ನು ನಡಿಸುತ್ತದೆ. ಹೀಗಿದ್ದರೂ ಕೆಲವೊಂದು ದೂರದಿಂದ ಬೆಂಕಿಯು ಮನುಷ್ಯನ ದೇಹವನ್ನು ಬೆಚ್ಚಗಿಟ್ಟು ಆರಾಮ ಕೊಡುವುದು. ಸಮೀಪದ ಸಂಪರ್ಕದಿಂದ ಆ ದೇಹಕ್ಕೆ ದು ಖಕರ ಕೇಡನ್ನು ಮಾಡುತ್ತದೆ. ಒಬ್ಬನ ಆಹಾರವನ್ನು ಬೇಯಿಸಲು ಕಟ್ಟಿಗೆಯನ್ನು ಸುಡುವ ಬೆಂಕಿಯನ್ನು ಅದನ್ನು ಇತರ ನೈಸರ್ಗಿಕ ಶಕ್ತಿಗಳಿಂದ ನಿಯಂತ್ರಿಸದಿದ್ದರೆ ಅವನು ವಾಸಿಸುತ್ತಿರುವ ಗ್ರಾಮವನ್ನು ಸುಟ್ಟು ಹಾಕಬಹುದು.

ಯಾವುದೇ ಸಮಯದಲ್ಲಿ ಬೆಂಕಿಯು ಒಬ್ಬ ವ್ಯಕ್ತಿಯನ್ನು ಇಲ್ಲವೇ ಅವನ ಆಸ್ತಿಯನ್ನು ಗಂಡಾಂತರಕ್ಕೊಳಪಡಿಸಿದರೆ, ಬೆಂಕಿಯ ನಡೆತೆಯನ್ನು ನಡಿಸುವ ನೈಸರ್ಗಿಕ ನಿಯಮಗಳನ್ನು ದೇವರು ರದ್ದು ಪಡಿಸಿದರೆ ಏನಾಗುತ್ತದೆ? ಬೆಂಕಿಯ ಲಕ್ಷಣಗಳು ತನ್ನ ಉದ್ದೇಶಗಳಿಗೆ ಹೊಂದಿಕೊಳ್ಳುವದಿಲ್ಲವೆಂದು ಪ್ರತೀ ಸಲ ಒಬ್ಬ ವ್ಯಕ್ತಿಯು ತೀರ್ಮಾನಿಸುವಾಗ ದೇವರು ಮಧ್ಯೆ ಪ್ರವೇಶಿಸಿದರೆ ಏನಾಗುವುದು? ಸತತವಾದ ಮಧ್ಯ ಪ್ರವೇಶಿಸುವಿಕೆಯೊಂದಿಗೆ ಪ್ರತ್ಯೇಕವಾದ ಸಂಗತಿಗಳಲ್ಲಿ ನೈಸರ್ಗಿಕ ಜಗತ್ತು ಸಾಮಾನ್ಯವಾಗಿ ವರ್ತಿಸುವುದೋ ಇಲ್ಲವೋ ಎಂಬುದನ್ನು ಒಬ್ಬನು ಎಂದೂ ತಿಳಿಯುವದಿಲ್ಲ. ಅದು ಎಂಥ ಗಲಿಬಿಲಿಯನ್ನು ಸೃಷ್ಟಿಸುವದಲ್ಲವೇ! ವಿಶ್ವದ ಎಲ್ಲಾ ನೈಸರ್ಗಿಕ ಶಕ್ತಿಗಳಿಂದ ಈ ಗಲಿಬಿಲಿಯನ್ನು ದ್ವಿಗುಣಗೊಳಿಸಿರಿ. ನೈಸರ್ಗಿಕ ನಿಯಮಗಳು ಇಲ್ಲದಿದ್ದರೆ, ಸ್ವೇಚ್ಚಾ ಚಿತ್ತ ಹಾಗೂ ನೈತಿಕ ಜವಾಬ್ದಾರಿಕೆಯು ತೆಗೆದು ಹಾಕಲ್ಪಡುತಿತ್ತು: ತಪ್ಪಾದ ಕೃತ್ಯಗಳು ಸಾಧ್ಯವಾಗುವದಿಲ್ಲ. ಮನುಷ್ಯನ ಪ್ರತಿಯೊಂದು ಭ್ರಾಂತಿಯನ್ನು ಸಂತುಷ್ಟಪಡಿಸುವುದಕ್ಕೆ, ಆತನ ಜಗತ್ತಿನ ನೈಸರ್ಗಿಕ ಕಾರ್ಯದೊಂದಿಗೆ ದೇವರು ಮಧ್ಯೆ ಪ್ರವೇಶಿಸದೇ ಇರುವಂಥದ್ದು ದೊಡ್ಡ ಆಶೀರ್ವಾದವಾಗಿದೆ.

ಅದೇ ರೀತಿಯಲ್ಲಿ, ದೇವರು ತನ್ನ ಜನರಿಗೆ ನಂಬಿಗಸ್ತಿಕೆಯ ಬಹುಮಾನವಾಗಿ ಶ್ರಮೆಯಿಂದ ಬಿಡುಗಡೆ ಕೊಡುವೆನೆಂದು ದೇವರು ವಾಗ್ದಾನ ಮಾಡುವದಿಲ್ಲ. ಹೆಚ್ಚಾಗಿ "ದುಷ್ಟರು ಯಾಕೆ ಸಮೃದ್ಧಿ ಹೊಂದುವರು ಮತ್ತು ನೀತಿವಂತರಿಗೆ ಕಠಿಣವಾದ ಸಂಗತಿಗಳು ಯಾಕೆ ಇರುವವು?" ಎಂಬ ಪ್ರಶ್ನೆಯು ಕೇಳಲ್ಪಟ್ಟಿದೆ. ಕೀರ್ತನೆ 73ರ ಬರಹಗಾರನು ಬಹಳ ದಿನಗಳ ಹಿಂದೆ ಈ ಸಮಸ್ಯೆಯೊಂದಿಗೆ ಹೋರಾಡಿದನು. ಹೊಸ ಒಡಂಬಡಿಕೆಯಲ್ಲಿ ದೇವರು ತನ್ನ ಜನರಿಗೆ ಮನುಷ್ಯನ ಸಾಮಾನ್ಯ ಕೆಡಕುಗಳಿಂದ ರಕ್ಷಿಸುವದಕ್ಕಾಗಿ "ದೈವಿಕ ಗಿಡಗಳ ಪೊದೆಯನ್ನು" ವಾಗ್ದಾನ ಮಾಡುವದಿಲ್ಲ. ದೇವರು ಕ್ರೈಸ್ತರನ್ನು ಕ್ಯಾನ್ಸರಿನಿಂದ ಇಲ್ಲವೇ ಇತರ ಹಾಳುಮಾಡುವ

ರೋಗಗಳಿಂದ ರಕ್ಷಿಸುವನೆಂದು ವಾಗ್ದಾನ ಮಾಡುವದಿಲ್ಲ. ನಾನು ಕ್ರೈಸ್ತನಾಗಿರುವೆನೆಂಬ ಸಂಗತಿಯು ನನ್ನ ಪ್ರಿಯರನ್ನು ಮರಣದಿಂದ ಕಾಪಾಡುವನೆಂದು ಅರ್ಥವಾಗುವದಿಲ್ಲ. ಕ್ರೈಸ್ತನಾಗಿರುವುದು ಮಾರ್ಗದಲ್ಲಿ ಅಪಘಾತಗಳಿಂದ ಕಾಪಾಡುವನೆಂಬ ಭರವಸೆ ಇರುವದಿಲ್ಲ. ದೇವರು ತನ್ನ ಮಕ್ಕಳಿಗೆ ಅಂಥ ವಿಶೇಷ ಮೆಚ್ಚಿಕೆಯ ವಾಗ್ದಾನ ಮಾಡಿದರೆ, ನಿಸರ್ಗದ ನಿಯಮಗಳು ಕಾರ್ಯಾಚರಣೆಯು ದೇವರ ಮಗು ಗಂಡಾಂತರವನ್ನು ಎದುರಿಸುವ ಪ್ರತಿಯೊಂದು ಸಮಯದಲ್ಲಿ ಅಡ್ಡಿಪಡಿಸಲ್ಪಡುವುದು. ಪ್ರೀತಿಸುವ ಮತ್ತು ಒಪ್ಪಿಗೆಯ ಹೃದಯದಿಂದ ದೇವರ ಸೇವೆ ಮಾಡುವದರ ಬದಲು ಜನರು ವಿಪತ್ತು, ಶ್ರಮೆ ಮತ್ತು ಮರಣಕ್ಕೆ ವಿರುದ್ಧವಾಗಿ ಒಂದು ರೀತಿಯ ಜಾಗತಿಕ ಇನ್ಸೂರನ್ಸ್ ಪಾಲಿಸಿಯನ್ನು ಹೊಂದಿಕೊಳ್ಳಲು ಆತನ ಸೇವೆಮಾಡುವರು. ಧರ್ಮವು ಸ್ವಾರ್ಥದ ವ್ಯಾಪಾರವಲ್ಲದೇ ಬೇರೇನೂ ಆಗುವದಿಲ್ಲಣಿ ಶುದ್ಧ ಹೃದಯದಿಂದ ಮತ್ತು ಸ್ವಾರ್ಥರಹಿತ ಉದ್ದೇಶದಿಂದ ದೇವರ ಸೇವೆ ಮಾಡುವ ಅವಕಾಶವು ಹೊರಟು ಹೋಗುವುದು.

## ಇತರರೊಂದಿಗೆ ಜೀವನ

"ನಿಮ್ಮಲ್ಲಿ ಒಬ್ಬನಾದರೂ ತನಗಾಗಿ ಬದುಕುವುದೂ ಇಲ್ಲ, ತನಗಾಗಿ ಸಾಯುವುದೂ ಇಲ್ಲ" (ರೋಮಾಪುರ 14:7). ಶ್ರಮೆಯ ಸಮಸ್ಯೆಯೊಳಗೆ ಈ ಹೇಳಿಕೆಯು ಇನ್ನೊಂದು ಒಳನೋಟವನ್ನು ಕಂಡು ಕೊಂಡಿದೆ. ಜನರು ಗುಂಪುಗಳಲ್ಲಿ ಒಟ್ಟಾಗಿ ಜೀವಿಸುವದರಿಂದ ಹೆಚ್ಚಾಗಿ ನಿರಪರಾಧಿಗಳು ಶ್ರಮೆ ಪಡುವಂಥದ್ದು ಸಂಭವಿಸುತ್ತದೆ: ಹೀಗೆ ಒಬ್ಬನು ಮಾಡುವಂಥದ್ದು ಇತರರ ಜೀವಿತಗಳ ಮೇಲೆ ಪರಿಣಾಮ ಬೀರುತ್ತದೆ.

ಒಬ್ಬ ಕುಡುಕ ವಾಹನ ಚಾಲಕನು ಕುಡಿದು ಮತ್ತನಾಗಿ, ತನ್ನ ಸಮ ತೂಲವನ್ನು ಕಳೆದು ಕೊಂಡು ಹೆಚ್ಚು ವೇಗದಿಂದ, ವಾಹನಗಳು ಚಲಿಸುತ್ತಿದ್ದ ಮಾರ್ಗದಲ್ಲಿ ವಾಹನ ಚಲಿಸಿದರೆ ಏನಾಗುವುದು ಎಂಬುದನ್ನು ಯೋಚಿಸಿರಿ. ಆ ಮಾರ್ಗದಲ್ಲಿ ಹೋಗುತ್ತಿರುವ ಇತರರು ಕಾನೂನಿಗೆ ಬದ್ಧರಾಗಿರುವ ನಾಗರಿಕರು ಅಮಲೇರದೇ ಇರುವದರಿಂದ ತಮ್ಮ ಇಂದ್ರಿಯಗಳನ್ನು ಸಂಪೂರ್ಣವಾಗಿ ಉಪಯೋಗಿಸಲು ಶಕ್ತರಾಗುವರು. ಅವರು ಮಾರ್ಗದಲ್ಲಿ ತಮ್ಮ ಪಕ್ಕದಲ್ಲಿ ಮಾರ್ಗ ನಿಯಮಗಳನ್ನು ಗಮನಿಸುತ್ತ ವಾಹನ ಚಾಲನೆ ಮಾಡುತ್ತಿರುವರು. ಹಿಗೀರುವಾಗ ಕುಡಿದು ಮತ್ತನಾದ ವಾಹನ ಚಾಲಕನು ತಪ್ಪಾದ ದಿಕ್ಕಿಗೆ, ಕಾರುಗಳ ಮಾರ್ಗದೊಳಗೆ ನುಗ್ಗ ಬಹುದು. ಕುಟುಂಬದ ಸದಸ್ಯರು ಅಪಘಾತಗೊಳಗಾಗಿ ಸಾಯುವರು ಇಲ್ಲವೇ ಗಾಯಗೊಳ್ಳಬಹುದು. ಅಪರಾಧಿಯಾದ ಕುಡುಕನ ಅಲಕ್ಷ್ಯದಿಂದ ನಿರ್ದೋಷಿಗಳು ಬಲಿಪಶುಗಳಾಗುವರು.

ಬಹು ಸಂಖ್ಯೆಯಲ್ಲಿ ಜನರು ಒಟ್ಟಾಗಿ ಸಮೀಪದಲ್ಲಿ ವಾಸಿಸುವಂಥದ್ದು ಶ್ರಮೆಗೆ ಕಾರಣ ವಾಗುತ್ತದೆ. ಹಾಗೆಯೇ ಒಬ್ಬ ತಪ್ಪಾದ ಕಾರ್ಯದ ಬಲವನ್ನು ಹೆಚ್ಚಿಸುತ್ತದೆ. "ಇತರರ ತಪ್ಪಿನ ಮತ್ತು ತಪ್ಪಾದ ಕಾರ್ಯಗಳ ಪರಿಣಾಮದಲ್ಲಿ ನಾನೇಕೆ ಕೂಡಿಸಲ್ಪಡ ಬೇಕು?" ಎಂದು ನೀವು ಹೇಳಬಹುದು. ಯಾವುದೇ ರೀತಿಯಲ್ಲಿ ಜಗತ್ತಿನ ಕೆಡಕುಗಳಲ್ಲಿ ಯಾವುದೂ ನಿಮ್ಮ ಮೇಲೆ ಪರಿಣಾಮ ಮಾಡದಷ್ಟು ಪ್ರತ್ಯೇಕವಾಗಿ ನೀವು ಇರಬಹುದೆಂದು ಊಹಿಸಿಕೊಳ್ಳಿರಿ. ಅದರಂತೆ ಇತರರು ನಿಮಗೆ ಕೊಡುವ ಆಶೀರ್ವಾದಗಳನ್ನೂ ಅವಕಾಶಗಳನ್ನೂ ನೀವು ಕಳೆದು ಕೊಳ್ಳುವಿರಿ. ನಮ್ಮ ಕೆಲವು ಅತ್ಯುತ್ತಮವಾದ ಅನುಭವಗಳು ಇತರರೊಂದಿಗಿನ ಸಂಬಂಧಗಳೊಂದಿಗೆ ಬರುತ್ತವೆ. ಜೀವನದ ಅಗತ್ಯತೆಗಳಿಗೂ ಸಹ ನಾವು ಇತರರ ಮೇಲೆ ಅವಲಂಭಿಸಿರುತ್ತೇವೆ. ಈ ವ್ಯಕ್ತಿಗಳ ಸಂಬಂಧಗಳಿಲ್ಲದೆ ನಮ್ಮ ಜೀವಿತವು ಎಷ್ಟು ಬಡ ವಾಗುತ್ತದಲ್ಲವೇ! ಒಂದಾಗಿ ಜೀವಿಸುವದರಲ್ಲಿಯ ಗಂಡಾಂತರಗಳನ್ನು ತಿರಸ್ಕರಿಸುವಾಗ

ಸಹಜೀವನದ ಆಶೀರ್ವಾದವನ್ನೂ ಅವಕಾಶಗಳನ್ನೂ ನಾವು ಹೊಂದಿಕೊಳ್ಳಲಾರೆವು.

## ಗುಣಲಕ್ಷಣದ ಮೇಲೆ ಶ್ರಮೆಯ ಪರಿಣಾಮ

ಶ್ರಮೆಯ ಅರ್ಥದಲ್ಲಿ ಇನ್ನೊಂದು ಒಳ ನೋಟವು ನೋವು ಸ್ವಭಾವದಲ್ಲಿ ಪರಿಹಾರವಾಗಬಹುದು - ಅಂದರೆ ಅದು ಶ್ರಮೆ ಹೊಂದುವವನನ್ನು ಹೆಚ್ಚು ಉತ್ತಮ ವ್ಯಕ್ತಿಯನ್ನಾಗಿ ಮಾಡಬಹುದು ಎಂಬುದು. ಪಾಪವು ಎಲ್ಲಾ ಶ್ರಮೆಯನ್ನು ನಿವಾರಿಸದಿದ್ದರೂ, ಅದರಲ್ಲಿ ಬಹುಮಟ್ಟಿಗೆ, ದುಷ್ಟತ್ವದ ಕಾರಣದಿಂದ ಬರುತ್ತದೆ.

ಮನುಷ್ಯನು ತಾನು ಒಳ್ಳೆಯವನು ಹಾಗೂ ತನಗೆ ಯಾವ ಕೊರತೆಯಿಲ್ಲ ಎಂದು ಹೇಳುವುದರಿಂದ ತನ್ನನ್ನು ಮೋಸಪಡಿಸಿ ಕೊಂಡಿದ್ದಾನೆ. ತಾನು ಬಡವನಾಗಿ, ನಿರ್ಗತಿಕನಾಗಿ, ನಗ್ನನಾಗಿ ಮತ್ತು ಆತ್ಮೀಕವಾಗಿ ಕುರುಡನಾಗಿ ಇದ್ದೇನೆ ಎಂಬುದನ್ನು ಅರ್ಥಮಾಡಿಕೊಳ್ಳುವದಿಲ್ಲ. ಅಪರಾಧವನ್ನು ಸಹಿಸದ ಪವಿತ್ರನಾದ ದೇವರ ದೃಷ್ಟಿಯಲ್ಲಿ ಮಾನವನು ದುಷ್ಟನೂ ಸ್ವಚಿತ್ತನೂ ಗರ್ವದಿಂದ ಉಬ್ಬಿಕೊಂಡವನೂ ಆಗಿದ್ದಾನೆ. ದಂಗೆ ಖೋರ ಮಗುವಿನಂತೆ - ಪಾಪಿಯು ದೇವರಿಗೆ ತನ್ನನ್ನು ಸಮರ್ಪಿಸಿಕೊಳ್ಳುವ ಮೊದಲು ಆತ್ಮದಲ್ಲಿ "ಮುರಿಯಲ್ಪಡ ತಕ್ಕದ್ದು" ಮತ್ತು ಆತನ ಉದ್ದೇಶಗಳಿಗೆ ತಕ್ಕವನನ್ನಾಗಿ ಮಾಡಿಕೊಳ್ಳಬೇಕು. ಒಬ್ಬ ವ್ಯಕ್ತಿಯ ಜೀವಿತವು ಚೆನ್ನಾಗಿ ನಡೆಯುವವರೆಗೆ ಅವನು ತನ್ನ ತಪ್ಪನ್ನೂ ಪಾಪವನ್ನೂ ಬಿಟ್ಟುಬಿಡಲು ಕಾರಣವನ್ನು ನೋಡುವದಿಲ್ಲಣಿ ಇದು ಪಾಪದ ಮೋಸಕರವಾದ ಭಾಗವಾಗಿರುತ್ತದೆ. ಬಹಳ ಸಲ, ಒಬ್ಬನು ನೋಯಿಸಲ್ಪಟ್ಟು ತೊಂದರೆಗೆ ಗುರಿಪಡಿಸಲ್ಪಡುವವರೆಗೆ ತನ್ನಲ್ಲಿರುವ ಕೊರತೆಯನ್ನು ಗುರಿತಿಸಿಕೊಳ್ಳುವದಿಲ್ಲ. ಆಗ ಮಾತ್ರವೇ ತನ್ನ ಸುಖದೊಳಗಿಂದ ಅಲ್ಲಾಡಿಸಲ್ಪಟ್ಟು ತನ್ನ ನಿಜವಾದ ಆತ್ಮಿಕ ಸ್ಥಿತಿಯನ್ನು ಎದುರಿಸುವಂತೆ ಮಾಡಲ್ಪಡುವನು. ಈ ಅರ್ಥದಲ್ಲಿ ವಿಚಾರವಿಲ್ಲದೇ ಪಾಪದಲ್ಲಿ ಜೀವಿ ಸಿದ್ದವನು, ತನ್ನ ನಾಶದ ಪರಿಸ್ಥಿತಿಯನ್ನು ಮತ್ತು ತನಗೆ ದೇವರ ಆಗತ್ಯತೆ ಇರುವದನ್ನು ನೋಡುವಂತೆ ಎಚ್ಚರಿಸುವ ಉದ್ದೇಶವನ್ನು ವಿಪತ್ತು ಸಾಧಿಸಬಹುದು.

ತೊಂದರೆಗಳ ಸಮಯವನ್ನು ಎದುರಿಸುವವರೆಗೆ ದೇವರ ಕಡೆಗೆ ಹಿಂದಿರುಗಲು ಮತ್ತು ದೇವರ ಚಿತ್ತವನ್ನು ಮಾಡಲು ನಿರಾಕರಿಸಿದ ವ್ಯಕ್ತಿಯನ್ನು ನೀವು ತಿಳಿದಿರಬಹುದು. ಸುವಾರ್ತೆಯ ಮೇಲೆ ಕಾರ್ಯ ಮಾಡುವದಕ್ಕಿಂತ ಎಷ್ಟೋ ಮೊದಲು ದೇವರ ಕಡೆಗೆ ತಾನು ತಿರುಗಿಕೊಳ್ಳಬೇಕೆಂದು ಬೌದ್ಧಿಕವಾಗಿ ಅವನು ತಿಳಿದುಕೊಂಡಿದ್ದನು. ಶ್ರಮೆಯು ತನ್ನಲ್ಲಿ ಒಳ್ಳೆಯದಾಗಿದೆ ಎಂದು ಯಾರೂ ಹೇಳುವದಿಲ್ಲ. ಆದರೆ ಶ್ರಮೆಯ ಯಾವುದೇ ಅನುಭವದಲ್ಲಿ ಒಳ್ಳೆಯದಾಗಿರುವಂಥದ್ದು ದೇವರ ಚಿತ್ತಕ್ಕೆ ಒಪ್ಪಿಸಿ ಕೊಳ್ಳುವುದಾಗಿದೆ. ಒಬ್ಬ ವ್ಯಕ್ತಿಯು ತನ್ನ ಮಾರ್ಗವು ಎಷ್ಟು ತಪ್ಪಾದದ್ದಾಗಿತ್ತು ಮತ್ತು ದೇವರ ವಿಮೋಚನಾ ಕೃಪೆಯ ಅಗತ್ಯತೆ - ತನಗೆ ಎಷ್ಟು ಇತ್ತು ಎಂಬುದನ್ನು ಒಪ್ಪಿಕೊಳ್ಳುವಂತೆ ಶ್ರಮೆಯು ಮಾಡುತ್ತದೆ.

ಶ್ರಮೆ ಪಡುವವನ ಗುಣವನ್ನೂ ಆತ್ಮವನ್ನೂ ಸುಂದರಗೊಳಿಸುವದರಲ್ಲಿ ಶಕ್ತರನ್ನಾಗಿ ಮಾಡುವದಕ್ಕೆ ಶ್ರಮೆಗೆ ಬಲವಿರುತ್ತದೆ: "ಯಾವ ಶಿಕ್ಷೆಯಾದರೂ ತತ್ಕಾಲಕ್ಕೆ ಸಂತೋಷ ಕರವಾಗಿ ತೋಚದೆ ದು ಖಕರವಾಗಿ ತೋಚುತ್ತದೆಣಿ ಆದರೂ ತರುವಾಯ ಅದು ಶಿಕ್ಷೆ ಹೊಂದಿದವರಿಗೆ ನೀತಿಯೆಂಬ ಫಲವನ್ನು ಕೊಟ್ಟು ಮನಸ್ಸಿಗೆ ಸಮಾಧಾನವನ್ನು ಉಂಟು ಮಾಡುತ್ತದೆ" (ಇಬ್ರಿಯ 12:11ಣಿ RSV). ನಮ್ಮ ಕಷ್ಟಗಳ ಮುಖಾಂತರ ಬಲದ ಹೊಸಮೂಲಗಳನ್ನು ಮತ್ತು ದೇವರಲ್ಲಿ ಶಕ್ತಿಯನ್ನು ಕಂಡುಕೊಳ್ಳಲು ನಾವು ನಡಿಸಲ್ಪಟ್ಟಿರುತ್ತೇವೆ. ಬಹುಶ ಜೀವನವು ನಮಗೆ ಯಾವಾಗಲೂ ಸುಲಭವಾಗಿತ್ತು, ನಮ್ಮ ಮಹತ್ವದ ಭಾವನೆಯೊಂದಿಗೆ ತುಂಬಿಸಲ್ಪಟ್ಟು, ನಮ್ಮ ಸ್ವಂತ ಚಿತ್ತದ ಮಾರ್ಗದಲ್ಲಿ ನಾವು

ಹೋಗಿದ್ದೇವೆ. ಈಗ ನಾವು ಎಷ್ಟು ನಿರಾಶಾದಾಯಕವಾಗಿ ಬಲಹೀನರಾಗಿದ್ದೇವೆ ಎಂಬುದನ್ನು ದು ಖಕರವಾದ ಅನುಭವದ ಮೂಲಕ ಕಲಿತು ಕೊಂಡಿದ್ದೇವೆ. ಅಂಥ ಅನುಭವದಿಂದ ಜೀವಿತವನ್ನು ಅರ್ಥಗರ್ಭಿತವಾಗಿ ಜೀವಿಸಲಿಕ್ಕೆ ಹೆಚ್ಚು ದೊಡ್ಡ ಸಾಮರ್ಥ್ಯವು ಬರುತ್ತದೆ. ತೊಂದರೆಗಳು, ದು ಖಗಳು, ಬಾಧೆಗಳು ಇಲ್ಲವೇ ಶ್ರಮೆಯು ಇಲ್ಲದಿದ್ದರೆ, ಧೈರ್ಯವಾಗಿರಲು, ತಾಳ್ಮೆಯಿಂದ ಸಹಿಸಲು ಸ್ವಾರ್ಥತ್ಯಾಗ ಮಾಡಲು ಮತ್ತು ಕರುಣೆಯುಳ್ಳವರಾಗಲು ಆಹ್ವಾನಿಸಲ್ಪಡುತ್ತಿರಲಿಲ್ಲಣಿ ಯಾಕಂದರೆ ಗುಣದ ಈ ಲಕ್ಷಣಗಳು ಶ್ರಮೆಯ ವಾತಾವರಣದಲ್ಲಿ ಬೆಳೆಯುತ್ತವೆ. "ಯಾಕೆ?" ಎಂದು ನೀವು ಕೇಳಿದರೆ ಮುಂದೆ ಉತ್ತರ ಕೊಡಲು ನಾನು ಶಕ್ತನಲ್ಲ. ಈ ರೀತಿಯಲ್ಲಿ ದೇವರು ಜಗತ್ತನ್ನು ಮಾಡಿದ್ದಾನೆ ಮತ್ತು ಆತನಿಗೆ ಚೆನ್ನಾಗಿ ಗೊತ್ತು ಎಂದು ಮಾತ್ರ ನಾನು ಹೇಳಬಲ್ಲೆ.

## ಕ್ರಿಸ್ತನ ಉದಾಹರಣೆ

ಪಾಪದಿಂದ ವಿಮೋಚನೆಗಾಗಿ ಶ್ರಮೆಯು ಅಗತ್ಯವಾಗಿದೆ. ಯಾಕಂದರೆ ಶಿಲುಬೆಯಿಲ್ಲದೇ ಕ್ಷಮಾಪಣೆ ಇರುವದಿಲ್ಲ. ತಪ್ಪಾದದ್ದು ಜಯ ಹೊಂದುವದೆಂದು ತೋರುವದರಲ್ಲಿ ಮೌನವಾಗಿ ಹಾಗೂ ಧೈರ್ಯದಿಂದ ತಗ್ಗಿಸುವಿಕೆಯನ್ನೂ ಅವಮಾನವನ್ನೂ ಸಹಿಸಿ ಕ್ರಿಸ್ತನು ಎಂಥಾ ಅದ್ಭುತಕರವಾದ ಉದಾಹರಣೆ ಒದಗಿಸಿದನಲ್ಲವೇ! "ದೇವರು ಲೋಕವನ್ನು ಕ್ರಿಸ್ತನಲ್ಲಿ ತನಗೆ ಸಮಾಧಾನ ಪಡಿಸಿಕೊಳ್ಳುತ್ತಿದ್ದನು" (2 ಕೊರಿಂಥ 5:19ಎ). ತನ್ನ ಪ್ರಿಯ ಕುಮಾರನ, ದೇವರ ನರಾವತಾರವಾದ ಕುಮಾರನ ಶ್ರಮೆಗಳಿಲ್ಲದೆ ದೇವರು ನಮಗೆ "ನಾನು ನಿನ್ನನ್ನು ಕ್ಷಮಿಸಿದ್ದೇನೆ" ಎಂದು ಹೇಳಲಾರನು, ಮರಣವನ್ನು ಮತ್ತು ಕೆಡುಕನ ಬಲವನ್ನು ಜಯಿಸಿ, ವಿಮೋಚಿತರ ಅಂತಿಮ ಜಯದ ಭರವಸೆ ಕೊಡುತ್ತಾ, ತನ್ನ ಪುನರುತ್ಥಾನದಲ್ಲಿ ಕುಮಾರನು ಹೊಂದಿದ ಜಯವು ಎಷ್ಟು ಅದ್ಭುತಕರವಾಗಿದೆಯಲ್ಲವೇ! ಶಿಲುಬೆಗೆ ತೂಗು ಹಾಕಲ್ಪಟ್ಟಾತನು "ನನ್ನನ್ನು ನೋಡಿರುವವನು ತಂದೆಯನ್ನು ನೋಡಿದ್ದಾನೆ" (ಯೋಹಾನ 14:9) ಎಂದು ಹೇಳಿರುವನೆಂದು ನಾವು ತಿಳಿದು ಕೊಳ್ಳುವಾಗ, ಆತನ ಜ್ಞಾನವನ್ನು ಇಲ್ಲವೇ ತಿಳುವಳಿಕೆಯನ್ನು ದಾಟಿ ಮಾನವ ಆತ್ಮದ ಕಷ್ಟ, ಶ್ರಮೆ ಇರುವುದಿಲ್ಲ ಎಂದು ನಾವು ತಿಳಿದುಕೊಳ್ಳುವೆವು. ಕ್ರಿಸ್ತನ ಶ್ರಮೆಯಲ್ಲಿ ಅಪೊಸ್ತಲ ಪೇತ್ರನು ಈ ಸಂದೇಶವನ್ನು ನಮಗಾಗಿ ಕಂಡು ಕೊಂಡನು:

> ನೀವು ಪಾಪಮಾಡಿ ಕಠಿಣವಾಗಿ ನಡಿಸಿಕೊಳ್ಳಲ್ಪಡುವಾಗ ಅದನ್ನು ತಾಳ್ಮೆಯಿಂದ ಸಹಿಸಿ ಕೊಳ್ಳುವದರಿಂದ ನಿಮಗೆ ಯಾವ ಲಾಭವಾಗುವುದು? ಆದರೆ ಸರಿಯಾದದ್ದನ್ನು ಮಾಡುವಾಗ ಅದಕ್ಕಾಗಿ ಕಷ್ಟಪಡುತ್ತ ತಾಳ್ಮೆಯಿಂದ ಅದನ್ನು ಸಹಿಸಿಕೊಂಡರೆ ದೇವರ ಮೆಚ್ಚಿಕೆಯನ್ನು ಪಡೆದುಕೊಳ್ಳುವಿರಿ. ಈ ಉದ್ದೇಶಕ್ಕಾಗಿ ನೀವು ಕರೆಯಲ್ಪಟ್ಟಿರುವಿರಿ. ಕ್ರಿಸ್ತನು ನಿಮಗಾಗಿ ಶ್ರಮೆಪಟ್ಟದ್ದರಿಂದ ನೀವು ಆತನ ಹೆಜ್ಜೆ ಜಾಡಿನಲ್ಲಿ ಆತನನ್ನು ಅನುಸರಿಸುವದಕ್ಕಾಗಿ ಉದಾಹರಣೆಯನ್ನು ಬಿಟ್ಟಿರುವನು. ಆತನು ಯಾವ ಪಾಪವನ್ನೂ ಮಾಡಲಿಲ್ಲ, ಆತನ ಬಾಯಲ್ಲಿ ಯಾವ ಮೋಸವೂ ಇರಲಿಲ್ಲ. ಬೈಯುವವರನ್ನು ಆತನು ಬೈಯಲಿಲ್ಲಣಿ ಶ್ರಮೆಪಡುತ್ತಿದ್ದಾಗ ಯಾರನ್ನೂ ಹೆದರಿಸಲಿಲ್ಲಣಿ ನ್ಯಾಯವಾಗಿ ತೀರ್ಪುಮಾಡುವಾತನಿಗೆ ಆತನು ತನ್ನನ್ನು ಒಪ್ಪಿಸಿ ಕೊಂಡನು (1 ಪೇತ್ರ 2:20-23).

ಯಾವ ಮನುಷ್ಯನೂ ಯೇಸುವಿನ ಹೆಜ್ಜೆ ಜಾಡಿನಲ್ಲಿ ನಡೆಯುತ್ತ ಶ್ರಮೆಯನ್ನು ತಪ್ಪಿಸಿಕೊಳ್ಳಲಾರನು. ದೇವರು ಮತ್ತು ಆತನ ಕುಮಾರನು ನನ್ನನ್ನು ನನ್ನ ಪಾಪಗಳಿಂದ

ವಿಮೋಚಿಸಲು ಬಹಳ ಶ್ರಮೆಯನ್ನು ಅನುಭವಿಸಿದರು. ದೇವರು ಶಿಲುಬೆಯ ಮೇಲಿನ ಅವಮಾನವನ್ನು ಮಹಿಮೆಯಲ್ಲಿ ಮತ್ತು ಜಯದಲ್ಲಿ ಬದಲಾಯಿಸುವುದಾದರೆ, ನನ್ನ ದು ಖದ ಶಿಲುಬೆಯನ್ನೂ ವಿಪತ್ತನ್ನೂ ಮಹಿಮೆಯ ಮತ್ತು ಸೌಂದರ್ಯದ ಕಿರೀಟಗಳನ್ನಾಗಿ ಮಾರ್ಪಡಿಸಲು ಆತನು ನಮಗೆ ಸಹಾಯ ಮಾಡುವನು.

## ಪರಲೋಕವು ಉತ್ತರದ ಭಾಗದಂತೆ

ಮಾನವ ಶ್ರಮೆಗೆ ಸಂಬಂಧಿಸಿ, ಅಂತಿಮವಾಗಿ ಒಂದು ಪದವನ್ನು ಹೇಳ ತಕ್ಕದ್ದು: ಆ ಪದವು "ಪರಲೋಕ." "ಕ್ಷಣಿಕವಾದ, ಅಲ್ಪವಾದ ಶ್ರಮೆಯು ನಮಗಾಗಿ ಎಲ್ಲಾ ಹೋಲಿಕೆಯನ್ನು ಮೀರಿ ಮಹಿಮೆಯ ನಿಶ್ಚಿತವಾದ ಬಲವನ್ನು ನಮಗಾಗಿ ಒದಗಿಸುತ್ತಿರುವನು" (2 ಕೊರಿಂಥ 4:17). ಮಾನವ ಶ್ರಮೆಯ ಇಡೀ ಕಥೆಯನ್ನು ಭೂಲೋಕವು ಹೇಳಲಾರದು. ತನ್ನ ಶ್ರಮೆ ಮತ್ತು ಕಣ್ಣೀರುಗಳೊಂದಿಗಿನ ಈ ಜೀವನವನ್ನು ದಾಟಿ, ಶುದ್ಧವಾದ, ಆನಂದದ ಕ್ಷೇತ್ರವಿರುವುದು. ಅಲ್ಲಿ ನಮ್ಮ ಕಣ್ಣಿನಿಂದ ಪ್ರತಿಯೊಂದು ಕಣ್ಣೀರು ಒರಿಸಲ್ಪಡುವುದು, ಪ್ರತಿಯೊಂದು ದು ಖವು ಸಂತೋಷವಾಗಿ ಮಾರ್ಪಡುವುದು.

ನನಗೆ ಆ ಮನೆಯಿರುವಂತೆ ಯೇಸುವು ಶಿಲುಬೆಯ ಭಾರವನ್ನು ಹೊತ್ತುಕೊಂಡನು. ನಿತ್ಯಜೀವದ ಶುಭವಾರ್ತೆಯನ್ನು ನಮಗಾಗಿ ಕಾದಿಡುವದಕ್ಕಾಗಿ ಅಪೊಸ್ತಲರೂ ಮತ್ತು ಹತಸಾಕ್ಷಿಗಳೂ ಸೆರೆವಾಸವನ್ನೂ ಹಿಂಸೆಯನ್ನೂ ಸಹಿಸಿದರು. ಯಾವ ಪಟ್ಟಣವನ್ನು ಕಟ್ಟುವವನೂ ನಿರ್ಮಾಣ ಮಾಡುವಾತನೂ ದೇವರಾಗಿರುವನೋ ಆ ಪಟ್ಟಣದ ಕಡೆಗೆ ನನ್ನ ದೃಷ್ಟಿಯನ್ನು ಇಟ್ಟು ನಾನು ಪ್ರಯಾಣ ಮಾಡುವಾಗ, ನನ್ನ ಭಾರವು ಹಗುರವಾಗುವದನ್ನು ಕಂಡುಕೊಳ್ಳುವೆನುಣಿ ಈ ಜೀವನದ ಹೋರಾಟಗಳನ್ನೂ ನಿರಾಶಗಳನ್ನೂ ದಾಟಿ ನಾನು ನೋಡಬಹುದು ಮತ್ತು "ಅತ್ಯುತ್ತಮವಾದದ್ದು ಇನ್ನೂ ಬರಬೇಕಾಗಿದೆ" ಎಂದು ತಿಳಿದಿರುವೆನು.

---

ಟಿಪ್ಪಣಿ

[1]ಮೇರಿ ಬೇಕರ್ ಎಡ್ಡಿ (1821-1910) ಎಂಬಾಕೆಯು ಯುಎಸ್ಎ ದಲ್ಲಿಯ "mental healing" ಚಳವಳದ ಭಾಗವಾಗಿದ್ದಳು. ಅನಂತರದಲ್ಲಿ Christian Scientismನ್ನು ಸ್ಥಾಪಿಸಿದಳು. ಆತ್ಮಿಕ ಗುಣಪಡಿಸುವಿಕೆಯ ಮೇಲೆ ಆಕೆ ತನ್ನ ವಿಚಾರವನ್ನು ಪ್ರಕಟಿಸಿದಳು. 1908ರಲ್ಲಿ *Christian Science Monitor* ವರ್ತಮಾನ ಪತ್ರಿಕೆಯನ್ನು ಸ್ಥಾಪಿಸಿದಳು.

ಈ ಪಾಠವು ಅಬಿಲೆನೆ ಕ್ರಿಷ್ಟಿಯನ್ ಕಾಲೇಜ್ ಭಾಷಣಗಳ, 1958 ಪುನರ್ ಮುದ್ರಣವಾಗಿದೆ. ಅಬಿಲೆನೆ ಕ್ರಿಶ್ಚಿಯನ್ ಯೂನಿವರ್ಸಿಟಿ ಲೆಕ್ಚರ್‌ಶಿಪ್ ಡೈರೆಕ್ಟರ್ ಅವರ ಅಪ್ಪಣೆಯಿಂದ ಉಪಯೋಗಿಸಲ್ಪಟ್ಟಿದೆ.